
# ಅಪರಂಜಿ

ತಿಳಿನಗೆಯ ಕಾರಂಜಿ



ನವೆಂಬರ್ - 2011





# ಅಪರಂಜಿ

ತಿಳಿನಗೆಯ ಕಾರಂಜಿ





ಸಂಪಾದಕ ಮಂಡಳಿ

ಸಂಪಾದಕರು
ಶ್ರೀ ಎಂ. ಶಿವಕುಮಾರ್

ಉಪ ಸಂಪಾದಕರು
ಶ್ರೀ ಬೇಲೂರು ರಾಮಮೂರ್ತಿ

ಶ್ರೀ ಎಚ್.ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ

ಟ್ರಸ್ಟಿಗಳು
ಶ್ರೀ ಎಂ. ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ಜಿ. ನಾಗೇಶ್
ಶ್ರೀ ವಿ.ಆರ್. ನಾಥ್
ಶ್ರೀ ಎ.ಆರ್. ರಾಜಗೋಪಾಲ್
ಶ್ರೀ ಕೆ. ರವೀಂದ್ರ ರಾವ್

ವಿಶೇಷ ಆಹ್ವಾನಿತರು
ಶ್ರೀ ಆರ್. ಶೇಷಗಿರಿರಾವ್
ಶ್ರೀ ಆರ್.ಎಸ್. ಪ್ರಶಾಂತ್

ಗೌರವ ಸಲಹೆಗಾರರು
ಶ್ರೀ ಅ.ರಾ.ಸೇ.



ಚಂದಾ ವಿವರ:
ಬಿಡಿ ಪ್ರತಿ: ರೂ. 10/-
ವಾರ್ಷಿಕ ಚಂದಾ: ರೂ. 100/-
ಹತ್ತು ವರ್ಷದ ಚಂದಾ: ರೂ. 750/-

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ






ಸಂಪುಟ 29
ಸಂಚಿಕೆ - 2
ನವೆಂಬರ್ - 2011


## ಈ ಸಂಚಿಕೆಯಲ್ಲಿ.....


| | | |
|---|---|---|
| ಅಪರಂಜಿ ಕಿಡಿ | **ಪ್ರಕಾಶ್** | 2 |
| ನಮ್ಮ ನಿಮ್ಮಲ್ಲಿ | **ಶಿವಕುಮಾರ್** | 3 |
| ಏಸೊಂದು ನಮೂನಿ... | **ಕುಂ. ವೀರಭದ್ರಪ್ಪ** | 10 |
| ಹಾರದಿಂದ ಅಗ್ರಹಾರ... | **ಗಣೇಶ ಹೆಗ್ಗಡೆ** | 13 |
| ಆನಂದ ವಿಹಾರ ಕ್ಲಬ್... | **ಎಚ್.ಆರ್. ಹನುಮಂತರಾವ್** | 16 |
| ತೆರಿಗೆ ಹಲವು ಬಗೆ | **ಬೇಲೂರು ರಾಮಮೂರ್ತಿ** | 23 |
| ತುಂತುರು | **ದಂನಾಆ** | 26 |
| ಅಲ್ಲಜ್ಜನ ವಚನಗಳು | **ಹಾ.ರಾ.** | 27 |
| ಮಾರುತಿ ಪ್ರಣಯ...... | **ನಾಗೇಶ್ ಹೆಗಡೆ** | 28 |
| ಹುರುಳಿಕಟ್ಟು | **ಎಚ್. ಗೋಪಾಲಕೃಷ್ಣ** | 32 |
| ನೀ ನಾತದೊಳಗೋ... | **ವಾಣೀ ಸುರೇಶ್** | 35 |
| ಮಾಸ ಭವಿಷ್ಯ | **ಸತ್ಯೋತ್ತಮಾಚಾರ್ಯ** | 39 |


**ಮುಖಪುಟ ವ್ಯಂಗ್ಯಚಿತ್ರ - ಜಿ.ಎಸ್. ನಾಗನಾಥ್**


*ಮುದ್ರಣ :* ರವಿ ಗ್ರಾಫಿಕ್ಸ್ – *ಅಕ್ಷರ ಜೋಡಣೆ :* ಒಮೇಗಾ ಲೇಸರ್‌ಟೆಕ್
*ಪ್ರಕಾಶಕರು :* ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು – 560 003. email: aparanji@hotmail.com



*ಸಂಪರ್ಕ ವಿಳಾಸ:* **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು – 560 068. ದೂರವಾಣಿ: 080-26688488. email: belururamamurthy@gmail.com

# ಅಪರಂಜಿ ಕಿಡಿ

● ಪ್ರಕಾಶ್



"Joyous of being Steve"

**● ಅಂತ ಅಪರಂಜಿ ಸಂಕಟದಲ್ಲೂ ನಕ್ಕಳಂತೆ !!**

★★★

ವಿದ್ಯುತ್ ಕೊಡಿ, ಕಲ್ಲಿದ್ದಲು ಕೊಡಿ – ಮುಖ್ಯ ಮಂತ್ರಿಗಳು

**● ಕತ್ತಲಲ್ಲಿ ಕಲ್ಲಿದ್ದಲು ಕಾಣದು !!**

★★★

ಲೋಡ್ ಷೆಡ್ಡಿಂಗ್ ಈಗ ಅಧಿಕೃತ – ಸುದ್ದಿ

**● ಸೋಮಾರಿಗಳಿಗೆ ಸುಸುದ್ದಿ !!**

★★★

ಅಪರಂಜಿಯ ಹಿತೈಷಿ ಮತ್ತೂರರ ಆತ್ಮಕ್ಕೆ ಚಿರಶಾಂತಿ ದೊರೆಯಲಿ.

★★★

''ದಯಾ''ನಿಧಿ ಮಾರನ್ ಮನೆಯ ಮೇಲೆ ಸಿ.ಬಿ.ಐ. ಧಾಳಿ – ಸುದ್ದಿ

**● ಟೀಕೆ ಅನಗತ್ಯ !!**

★★★

ರಾಜಕೀಯದಲ್ಲಿ ಆಧ್ಯಾತ್ಮ ಬೆರೆಸಬೇಕು – ನಿತಿನ್ ಗಡ್ಕರಿ

**● ಆಧ್ಯಾತ್ಮವೂ ಹಳಸಿ ಹೋದೀತು ಎಚ್ಚರಿಕೆ !!**

★★★

ದೇಶಾದ್ಯಂತ ಮೊಬೈಲ್ ರೋಮಿಂಗ್ ಉಚಿತ – ಪತ್ರಿಕೆ

**● ರೋಮಿಯೋಗಳಿಗೆ ಒಳ್ಳೆಯ ಕಾಲ !!**

★★★

## "ನಮ್ಮ ನಿಮ್ಮಲ್ಲಿ"

**ಮೊ**ನ್ನೆ ರಾಜಾಜಿನಗರಕ್ಕೆ ಯಾವುದೋ ಕೆಲಸದ ನಿಮಿತ್ತ ಹೊರಟಿದ್ದಾಗ ಮೊಬೈಲ್ ಗುಣುಗುಟ್ಟಿತು. ಕಾರು ಚಾಲನೆ ಮಾಡುವಾಗ ಮೊಬೈಲ್‌ನಲ್ಲಿ ಮಾತನಾಡುವುದನ್ನು ನನಗೆ ನಾನೇ ಬಹಿಷ್ಕರಿಸಿಕೊಂಡಿದ್ದೇನೆ. ಹಾಗಾಗಿ ಕಾರನ್ನು ಹೊರಡಿಸುವ ಮೊದಲೇ ಮೊಬೈಲನ್ನು ನಿಷ್ಕ್ರಿಯಗೊಳಿಸುವುದು ವಾಡಿಕೆ. ಇಂದು ಆ ಕೆಲಸವನ್ನು ಮರೆತಿದ್ದೆ. ಸರಿ ಕಾರನ್ನು ಬದಿಗೆ ನಿಲ್ಲಿಸಿ ಕರೆ ಸ್ವೀಕರಿಸಿದೆ. ಅತ್ತಣ ಬದಿಯಿಂದ ನನ್ನ ಗೆಳೆಯ ಪ್ರಕಾಶ್, ''ಮುಂದಿನ ವಾರ ಆಯುಧ ಪೂಜೆಯ ದಿನ ನಂದಿ ಬಳಿ ಇರೋ ನಮ್ಮ ತೋಟಕ್ಕೆ ಹೋಗಿ ಮಾರನೆಯ ದಿನ ಹಿಂದಕ್ಕೆ ಬರೋಣ ಅಂದ್ಕೊಂಡೆ. ಬರ್ತೀಯಾ?'' ಅಂತ ಕೇಳಿದ. ''ಹ್ಯಾಗೆ ಹೋಗೋದು?'' ಅಂತ ಪ್ರಶ್ನಿಸಿದೆ. ''ನಿನ್ನ ಕಾರಿನಲ್ಲೇ'' ಅಂತ ಉತ್ತರ ಬಂತು. ''ಸರಿ'' ಅಂದೆ. ಥ್ಯಾಂಕ್ಸ್ ಹೇಳಿ ಪ್ರಕಾಶ್ ಸಂಭಾಷಣೆಯನ್ನು ಮೊಟಕಿಸಿದ.

ಹಬ್ಬದ ದಿನಗಳಲ್ಲಿ ನಾವಿಬ್ಬರೂ ಇಷ್ಟು ಸಲೀಸಾಗಿ, ಯಾರ ಒಪ್ಪಿಗೆಗೂ ಯತ್ನಿಸದೇ ಇಂತಹ ಮಹತ್ವದ ನಿರ್ಣಯವನ್ನು ತೆಗೆದುಕೊಳ್ಳಲು ಸಾಧ್ಯವಾಗಿದ್ದಕ್ಕೆ ಮುಖ್ಯ ಕಾರಣ ನಾವಿಬ್ಬರೂ ವಿಧುರರಾಗಿರುವುದು. ಪ್ರಕಾಶ್ ಮತ್ತು ನಾನು ಕಾಲೇಜ್ ಸಹಪಾಠಿಗಳು. ಜೀವನದ ವಿವಿಧ ಹಂತಗಳಲ್ಲಿ ನಮ್ಮ ಬದಲಾಗುತ್ತಿರುವ ಆಸಕ್ತಿ ಅವಕಾಶಗಳಿಗನುಗುಣವಾಗಿ ನಾವು ಬೇರೆ ಬೇರೆ ಗೆಳೆಯರ ಗುಂಪುಗಳನ್ನು ಸೃಷ್ಟಿಸಿಕೊಳ್ಳುತ್ತ ಮುಂದೆ ಸಾಗುತ್ತೇವೆ. ಹೀಗಾಗಿ ಇಪ್ಪತ್ತನೆಯ ವಯಸ್ಸಿನಲ್ಲಿ ಒಬ್ಬರನ್ನು ಒಬ್ಬರು ಬಿಟ್ಟಿರಲಾರದ ಗೆಳೆತನಗಳು ಕ್ರಮೇಣ ಮಾಸುತ್ತಾ ಬಂದು ಅರವತ್ತರ ಹೊತ್ತಿಗೆ ಕೇವಲ ಕುಶಲ ಪ್ರಶ್ನೆಯೊಂದಿಗೆ ಮುಗಿಯುವಂತಹ ಮಟ್ಟವನ್ನು ಮುಟ್ಟುವುದು ಬಹು ಸಾಮಾನ್ಯ. ಆದರೆ ಒಂದು ಗೆಳೆತನ ಜೀವನ ಪರ್ಯಂತ ಉಳಿದಿದ್ದರೆ ಅದಕ್ಕೆ ಮುಖ್ಯ ಕಾರಣ ಆಸಕ್ತಿಗಳ ಹೊಂದಾಣಿಕೆ. ಆಟದ ಸಾಮಾನು, ಆಟಿಕೆಗಳೊಡನೆ ಚಿಕ್ಕಂದಿನಲ್ಲಿ ರೂಢಿಸಿಕೊಂಡ ಗಾಢ ಪ್ರೇಮವನ್ನು ನಾವಿಬ್ಬರೂ ಈ ಇಳಿವಯಸ್ಸಿನಲ್ಲೂ ಅಷ್ಟೇ ಪ್ರಖರತೆಯಿಂದ ಉಳಿಸಿಕೊಂಡು ಬಂದಿರುವುದು ನಮ್ಮ ಗೆಳೆತನದ ಸ್ಥಿರತೆಗೆ ಒಂದು ಕಾರಣವಿರಬಹುದು. ಅಲ್ಲದೇ ಪ್ರಕಾಶನ ಅನೇಕ ಗುಣಗಳನ್ನು ನಾನು


**ಕೊರವಂಜಿ – ಅಪರಂಜಿ ಟ್ರಸ್ಟ್**

**ಅರ್ಪಿಸುವ**

**ಬಹುಭಾಷಾ ವೈವಿಧ್ಯತೆಯ**

**ಹಾಸ್ಯೋತ್ಸವ**

**ಭಾನುವಾರ 25.12.2011**

**ಎಚ್.ಎನ್.ಕಲಾಕ್ಷೇತ್ರ, ಜಯನಗರ, ಬೆಂಗಳೂರು**

**ವಿವರಗಳು ಮುಂದಿನ ಸಂಚಿಕೆಯಲ್ಲಿ**



ಹೊಟ್ಟೆಕಿಚ್ಚು ಪಡುವಷ್ಟರ ಮಟ್ಟಿಗೆ ಮೆಚ್ಚಿಕೊಂಡಿದ್ದೇನೆ. ಇದಕ್ಕೆ ಒಂದೆರಡು ನಿದರ್ಶನಗಳು. ಬಡವರಿಗೆ, ಕೈಲಾಗದವರಿಗೆ ಏನಾದರೂ ಅರ್ಥಪೂರ್ಣ ಸಹಾಯ ಮಾಡಬೇಕೆಂದು ಪ್ರಕಾಶನ ಆಶೆ. ಕಳೆದ ವರ್ಷ ಒಮ್ಮೆ ಅವನನ್ನು ಅವನ ಹಳ್ಳಿಯ ಮಾಧ್ಯಮಿಕ ಶಾಲೆಯ ವಾರ್ಷಿಕೋತ್ಸವಕ್ಕೆ ಮುಖ್ಯ ಅತಿಥಿಯನ್ನಾಗಿ ಕರೆದಿದ್ದರಂತೆ. ಇವನು ವೇದಿಕೆಯ ಮೇಲೆ ಕುಳಿತು ಊರಿನ ರಾಜಕೀಯ ಪುಡಾರಿಯ ಅರ್ಥಹೀನ ಭಾಷಣವನ್ನು ಕೇಳಿಸಿಕೊಳ್ಳುತ್ತಿದ್ದಾಗ ಮುಂದಿನ ಸಾಲಿನಲ್ಲಿ ಕುಳಿತಿದ್ದ ಒಬ್ಬ ಕುಂಟ ಕಣ್ಣಿಗೆ ಬಿದ್ದನಂತೆ. ಮುಂದೆ ಆದದ್ದನ್ನು ಪ್ರಕಾಶನ ಮಾತಿನಲ್ಲೇ ಕೇಳಿ.

''ಅವನ ಹೆಸರು ಶಿವಪ್ಪ. ಅವನಿಗೆ ಬಲಗಾಲು ಮಂಡಿಯಬಳಿ ಕತ್ತರಿಸಿತ್ತು. ನನಗೆ ಅಯ್ಯೋಪಾಪ ಅನ್ನಿಸಿತು. ಸಭೆ ಮುಗಿದಮೇಲೆ ಅವನ ಬಳಿ ಹೋಗಿ ವಿಚಾರಿಸಿದೆ. ಉಳುಮೆ ಮಾಡುತ್ತಿರುವಾಗ ಓಂದು ಟ್ರಾಕ್ಟರ್ ಅಪಘಾತದಲ್ಲಿ ಅವನು ತನ್ನ ಕಾಲನ್ನು ಕಳೆದುಕೊಂಡಿದ್ದ. ಕೃತಕ ಕಾಲನ್ನು ಜೋಡಿಸಿಕೊಳ್ಳಲು ಅವನಿಗೆ ಅನುಕೂಲವಿರಲಿಲ್ಲ. ತಕ್ಷಣ ನಾನು ಅವನಿಗೆ ಕೃತಕ ಕಾಲನ್ನು ಕೊಡಿಸುವುದಾಗಿ ಆಶ್ವಾಸನೆ ನೀಡಿದೆ. ಅವನ ಮೊಬೈಲ್ ನಂಬರ್ ಬರೆದುಕೊಂಡೆ. ಬೆಂಗಳೂರಿಗೆ ಬಂದ ತಕ್ಷಣ ನನ್ನ ರೋಟರಿ ಗೆಳೆಯರನ್ನು ವಿಚಾರಿಸಿ ಕೃತಕಕಾಲುಗಳನ್ನು ಉಚಿತವಾಗಿ ಹೊಂದಿಸುವ ಮುಂದಿನ ಶಿಬಿರ ಎಲ್ಲಿ, ಯಾವಾಗ ಎಂಬುದನ್ನು ವಿಚಾರಿಸಿ ಕೊಂಡೆ. ಬನ್ನೇರುಘಟ್ಟದಲ್ಲಿ ಇನ್ನು ಐದು ದಿನಗಳಲ್ಲಿ ಶಿಬಿರ ನಡೆಯುವುದಿತ್ತು. ಶಿವಪ್ಪನಿಗೆ ಫೋನ್ ಮಾಡಿ ಮುಂದಿನ ಮಂಗಳವಾರ ಬನ್ನೇರುಘಟ್ಟದ ಶಿಬಿರಕ್ಕೆ ಬಂದುಬಿಡು. ಅಲ್ಲಿ ನಿನಗೆ ಉಚಿತವಾಗಿ ಕಾಲನ್ನು ಜೋಡಿಸುತ್ತಾರೆ ಅಂತ ಹೇಳಿ ಅಲ್ಲಿನ ವಿಳಾಸವನ್ನೂ ನೀಡಿದೆ. ''ನನಗೆ ಅಲ್ಲಿಗೆ ಹೋಗಲು ದಾರಿ ತಿಳಿಯದು. ನಮ್ಮ ಹಳ್ಳಿಯಿಂದ ಬಸ್ಸು ಜಯನಗರದ ಬಸ್‌ಸ್ಟಾಂಡಿಗೆ ಬರುತ್ತೆ'' ಅಂತ ಹೇಳಿದ. ನಾನು, ಸರಿ ಹಾಗಾದರೆ ಬೆಳಗ್ಗೆ ಹನ್ನೊಂದು ಘಂಟೆಯ ಹೊತ್ತಿಗೆ ಅಲ್ಲಿಗೆ ಬಂದುಬಿಡು. ಜಯನಗರದಿಂದ ನಾನು ನಿನ್ನನ್ನ ಕಾರಿನಲ್ಲಿ ಕರೆದುಕೊಂಡುಹೋಗಿ ಕಾಲು ಕೊಡಿಸುತ್ತೇನೆ ಅಂತ ಹೇಳಿದೆ. ಮಂಗಳವಾರ ಹತ್ತೂವರೆಗೇ ನಾನು ಬಸ್‌ಸ್ಟಾಂಡಿನ ಬಳಿ ಹಾಜರ್. ಹನ್ನೊಂದಾಯಿತು. ಹನ್ನೆರಡೂ ಆಯಿತು. ಶಿವಪ್ಪನಿಗೆ ಫೋನ್ ಮಾಡಿದರೆ ನಾಟ್ ರೀಚಬಲ್ ಅಂತ ಬರುತ್ತಿತ್ತು. ಬಸ್ಸಿನಲ್ಲಿ ಬರುತ್ತಿರಬಹುದು, ಬಂದ ತಕ್ಷಣ ಅವನೇ ಫೋನ್ ಮಾಡುತ್ತಾನೆ ಅಂತ ಸಮಾಧಾನ ಮಾಡಿಕೊಂಡು ಕಾಯುವುದನ್ನು ಮುಂದುವರಿಸಿದೆ. ಒಂದು ಗಂಟೆ ಹೊತ್ತಿಗೆ ಪುನಃ ಅವನಿಗೆ ಫೋನ್ ಮಾಡಿದೆ. ಆಸಾಮಿ ಸಿಕ್ಕ. ಎಲ್ಲಿದ್ದೀಯಾ ಅಂತ ಕೇಳಿದೆ. ಅಳ್ಳೀಲೇ ಇವ್ನಿ ಅಂದ ಅವ. ಶಿಬಿರ ಇದೆ ಬಾ ಅಂತ ಹೇಳಿದ್ನಲ್ಲಾ ಅಂತ ರೇಗಿದೆ. ಇವತ್ತೆಂಗೆ ಬರಕ್ಕಾಯ್ತತೆ? ಇವತ್ತು ಆಯುಧ ಪೂಜೆ ಅಲ್ಲವ್ರಾ ಅಂತ ಹೇಳಿದ ಶಿವಪ್ಪ''

''ಆಮೇಲೆ ನೀನೇನು ಮಾಡಿದೆ?'' ಅಂತ ನಾನು ಪ್ರಕಾಶನನ್ನ ಕೇಳಿದೆ.

''ಮಾಡೋದೇನು, ನಮ್ಮ ದೇಶದಲ್ಲಿ ಸಾರ್ವಜನಿಕ ಸೇವೆಯನ್ನ ಪ್ರಾಮಾಣಿಕವಾಗಿ ಮಾಡೋದು ಅಷ್ಟೇನು ಸುಲಭದ ಕೆಲಸ ಅಲ್ಲ ಎಂಬ ಸತ್ಯದ ಅರಿವಾಯಿತು. ನನ್ನ ಗೆಳೆಯರಿಗೆ ಹೇಳಿ ಮುಂದಿನ ಶಿಬಿರವನ್ನು ನನ್ನ ಹಳ್ಳಿಯಲ್ಲೇ ನಡೆಸುವಂತೆ ಮಾಡಿದೆ. ಸುತ್ತಮುತ್ತಲ ಹಳ್ಳಿಯ ಅನೇಕರಿಗೆ ಇದರಿಂದ ಒಳ್ಳೆಯದಾಯಿತು. ಒಂದು ರೀತಿಯಲ್ಲಿ ಅವನು ಅವತ್ತು ಕೈಕೊಟ್ಟದ್ದರಿಂದ ಹೆಚ್ಚು ಜನಗಳಿಗೆ ಸಹಾಯವಾಯಿತು'' ಅಂದ ಪ್ರಕಾಶ್.

ಪ್ರಕಾಶ್ ಒಬ್ಬ ಸೃಜನಶೀಲ ವ್ಯಕ್ತಿ. ಯಾವಾಗಲೂ ಏನನ್ನಾದರೂ ಹೊಸ ಸಂಶೋಧನೆಗಳನ್ನು ಮಾಡುತ್ತಿರುವುದೇ ಅವನ ಪ್ರವೃತ್ತಿ. ಒಮ್ಮೆ ಅವನು ಪತ್ನಿ ಸಮೇತ ಯೂರೋಪ್ ದೇಶಗಳ ಯಾತ್ರೆ ಕೈಗೊಂಡಿದ್ದ. ದಂಪತಿಗಳಿಬ್ಬರಿಗೂ ಊಟಕ್ಕೆ ಅನ್ನವಿಲ್ಲದೇ ಇದ್ದರೆ ಊಟಮಾಡಿದಂತೆಯೇ ಆಗುವುದಿಲ್ಲ. ಯೂರೋಪ್‌ನ ಹೋಟೆಲುಗಳಲ್ಲಿ ಅನ್ನ ಕೇಳುಕ್ಕಾಗುತ್ತದೆಯೇ? ಇದಕ್ಕೆ ಪ್ರಕಾಶ್ ಒಂದು ಸುಲಭ ಉಪಾಯ ಕಂಡುಹಿಡಿದ. ಯಾತ್ರೆಗೆ ಒಂದು ದೊಡ್ಡ ಥರ್ಮಾಸ್ ಫ್ಲಾಸ್ಕ್ ತೆಗೆದುಕೊಂಡು ಹೋಗಿದ್ದ. ಬೆಳಗ್ಗೆ ತಿಂಡಿಯಾದನಂತರ, ಊರು ನೋಡುವುದಕ್ಕೆ ಹೊರಡುವ ಮುಂಚೆ ಫ್ಲಾಸ್ಕಿನಲ್ಲಿ ಅಕ್ಕಿಹಾಕಿ ಕುದಿಯುವ ನೀರನ್ನ ತಕ್ಕ ಪ್ರಮಾಣದಲ್ಲಿ ಹಾಕಿ ಮುಚ್ಚಳವನ್ನ ಭದ್ರವಾಗಿ ಮುಚ್ಚಿ ಗಂಡ ಹೆಂಡತಿ ಊರು ಸುತ್ತುತ್ತಿದ್ದರು. ಮಧ್ಯಾಹ್ನ ಊಟದ ಸಮಯಕ್ಕೆ ಫ್ಲಾಸ್ಕ್ ತೆಗೆದರೆ ಬಿಸಿಬಿಸಿ ಅನ್ನ ಸಿದ್ಧವಾಗಿರುತ್ತಿತ್ತು. ಚಟ್ನಿಪುಡಿ ಉಪ್ಪಿನ ಕಾಯಿ ಹೆಂಡತಿಯ ಬ್ಯಾಗಿನಿಂದ ಹೊರಬರುತ್ತಿತ್ತು. ಇನ್ನು ಯೋಗರ್ಟಿಗೇನೂ ಆ ದೇಶಗಳಲ್ಲಿ ಬರವಿಲ್ಲವಲ್ಲ.

ಆಯುಧಪೂಜೆಯ ದಿನ ಬೆಳಗ್ಗೆ ಪ್ರಕಾಶ್ ನಮ್ಮ ಮನೆಗೆ ಬಂದ. ಹತ್ತು ಘಂಟೆಗೆ ಮನೆಯಿಂದ ಹೊರಟೆವು. ಹೆಬ್ಬಾಳ ಸೇರಿ, ವಿಮಾನ ನಿಲ್ದಾಣದ ಹಾದಿಯಲ್ಲಿ ಸಾಗಿ ನಂದಿ ಬೆಟ್ಟ ಕಾಣಿಸುವ ಹೊತ್ತಿಗೆ ಸಮಯ ಹನ್ನೊಂದಾಗಿತ್ತು. ಅಲ್ಲಿ ಹೆದ್ದಾರಿಯಿಂದ ಎಡಕ್ಕೆ ತಿರುಗಿದರೆ ನಂದಿ ಗ್ರಾಮ. ಪ್ರಕಾಶ್ ತನ್ನ ಬಾಲ್ಯವನ್ನು ಕಳೆದ ಊರು ಅದು. ''ಇಲ್ಲಿ ಚೋಳರ ಕಾಲದ ಭೋಗನಂದೀಶ್ವರ ದೇವಸ್ಥಾನ ಇದೆ. ನಾಳೆ ಬೆಳಗ್ಗೆ ಇಲ್ಲಿಗೆ ಪುನಃ ಬರೋಣ'' ಅಂತ ಪ್ರಕಾಶ್ ಹೇಳಿದ. ನಂದಿಗ್ರಾಮವನ್ನು ದಾಟಿ ಮುಂದೆ ಸಾಗಿದರೆ ಸುಲ್ತಾನ್ ಪೇಟೆ ಎಂಬ ಹಳ್ಳಿ. ಇದರ ಸಮೀಪದಲ್ಲಿ ಬ್ರಿಟಿಷರ ಕಾಲದ ಒಂದು ಸ್ಮಶಾನವಿದೆ. ಇದರ ಹೆಗ್ಗಳಿಕೆ ಅಂದರೆ ಇಲ್ಲಿನ ಬ್ರಿಟಿಷರ ಗೋರಿಗಳನ್ನು ಇಂದಿಗೂ ಗ್ರಾಮಸ್ಥರು ಚೊಕ್ಕಟವಾಗಿಟ್ಟು ಗೌರವದಿಂದ ಕಾಪಾಡಿದ್ದಾರೆ. ಇಲ್ಲಿಂದ ಇನ್ನು ಸ್ವಲ್ಪ ಮುಂದೆ ಹೋಗಿ ಪ್ರಕಾಶನ ತೋಟವನ್ನು ಸೇರಿದೆವು. ತೋಟದ ಮನೆಯ ಅಂಗಣದಿಂದ ಕಣ್ಣು ಹಾಯಿಸಿದರೆ ತೋಟದ ಬೇಲಿಗೆ ಅಂಟಿದಂತೆ ಧುತ್ತೆಂದು ಆಗಸದತ್ತ ಹರಡಿರುವ ನಂದಿ ಬೆಟ್ಟ. ಬೆಟ್ಟದ ತುದಿಯಿಂದ ಚಾಚಿರುವ ಕಡಿದಾದ ಬಂಡೆಗಲ್ಲೊಂದು ನನ್ನ ಗಮನವನ್ನು ಸೆಳೆಯಿತು. ಅದೇನೆಂದು ಕೇಳಿದಾಗ ''ಅದೇ ಟಿಪ್ಪೂಸ್ ಫಾಲ್'' ಅಂತ ಪ್ರಕಾಶ್ ಉತ್ತರಿಸಿದ. ಟಿಪ್ಪೂಸ್ ಫಾಲ್ ಅನ್ನು ಕೆಳಗಿನಿಂದ ನೋಡಿದ್ದು ನನಗೆ ಇದೇ ಮೊದಲು. ತೋಟದಿಂದ ಆಚೆ ಎಡಕ್ಕೆ ತಿರುಗಿ ಮುಂದಿನ ಹಾದಿಯಲ್ಲಿ ನಾಲ್ಕು ಹೆಜ್ಜೆ

ಹಾಕಿದರೆ ಕಣಿವೆ ಬಸವಣ್ಣನನ್ನು ನೋಡಬಹುದು. ಇದು ನಮ್ಮ ಬಸವನಗುಡಿಯ ಬಸವಣ್ಣನಿಗಿಂತ ದೊಡ್ಡದು.

ಪ್ರಕಾಶನ ತೋಟದಲ್ಲಿರುವ ತೋಟದ ಮನೆಯನ್ನು ಪ್ರಕಾಶನೇ ವಿನ್ಯಾಸಗೊಳಿಸಿ ನಿರ್ಮಿಸಿದ್ದು. ಮನೆಯನ್ನು ನೋಡಿದ ತಕ್ಷಣ ಅದನ್ನು ಯಂತ್ರಶಿಲ್ಪಿಯೊಬ್ಬ ನಿರ್ಮಿಸಿದ್ದೆಂದು ಸುಲಭವಾಗಿ ತಿಳಿಯುತ್ತಿತ್ತು. ತೆಳುವಾದ ಕಬ್ಬಿಣದ ಕಂಭಗಳು, ಕಬ್ಬಿಣದ ತಾರಸಿಯ ತೊಲೆಗಳು ಇವುಗಳನ್ನೆಲ್ಲಾ ಒಂದು ಭದ್ರವಾದ ಅಸ್ಥಿಪಂಜರದಂತೆ ಜೋಡಿಸಿ ಬಿದಿರು ತಡಿಕೆಯ ಎರಡು ಪದರಗಳಿಂದ ಗೋಡೆಗಳನ್ನು ಸೃಷ್ಟಿಸಿ ಮನೆ ನಿರ್ಮಾಣವಾಗಿತ್ತು. ಕೊಠಡಿಯ ಒಳಗೆ ಬಹು ತಂಪಾಗಿತ್ತು. ಸಹಜವಾಗಿ ಬೀಸುವ ಗಾಳಿಯನ್ನು ಬಳಸಿ ನಿರ್ಮಿಸಿದ ಒಂದು ವಿನೂತನ ಮಾದರಿಯ ಗಾಳಿ ಸಂಚಾರ ವ್ಯವಸ್ಥೆ ಇದಕ್ಕೆ ಕಾರಣವಾಗಿತ್ತು. ಪ್ರಕಾಶನ ಸೋದರಳಿಯ ಸುಭಾಷ್ ಅಲ್ಲಿನ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದ. ನಂದಿಗ್ರಾಮದಲ್ಲೇ ಪ್ರಕಾಶನ ಸೋದರಮಾವ ಮತ್ತು ಸೋದರತ್ತೆ ವಾಸಿಸುತ್ತಿದ್ದರು. ನಮ್ಮ ಅಂದಿನ ಊಟದ ವ್ಯವಸ್ಥೆ ಅವರ ಮನೆಯಿಂದಲೇ ಪೂರೈಕೆಯಾಗಿತ್ತು.

ಮಾರನೆಯ ಬೆಳಗ್ಗೆ ನಾವಿಬ್ಬರೂ ದೇವಸ್ಥಾನ ನೋಡಲು ಹೊರಟೆವು. ನಂದಿಗ್ರಾಮದಲ್ಲಿರುವ ಈ ಭೋಗನಂದೀಶ್ವರ ದೇವಸ್ಥಾನ ಬಹು ಪುರಾತನವಾದದ್ದೆಂದು ಅಲ್ಲಿನ ಪ್ರತೀತಿ. ವಾಸ್ತವವಾಗಿ ಇಲ್ಲಿರುವುದು ಮೂರು ದೇವಸ್ಥಾನಗಳು, ಎಡಪಕ್ಕದಲ್ಲಿ ಅರುಣಾಚಲೇಶ್ವರ, ಬಲಭಾಗದಲ್ಲಿ ಭೋಗನಂದೀಶ್ವರ. ಇವೆರಡರ ಮಧ್ಯೆ ಚಿಕ್ಕದಾಗಿ ಉಮಾಮಹೇಶ್ವರ ದೇವಸ್ಥಾನ. ಈ ದೇವಸ್ಥಾನ ಸಂಕೀರ್ಣದ ನಿರ್ಮಾಣದಲ್ಲಿ ಅನೇಕ ರಾಜವಂಶಗಳ ಪಾತ್ರವಿದೆ. ಗಂಗರಸರು, ಹೊಯ್ಸಳರು, ಪಲ್ಲವರು, ಚೋಳರು ವಿವಿಧ ಕಾಲಘಟ್ಟಗಳಲ್ಲಿ ಹಲವು ಭಾಗಗಳನ್ನು ಕಟ್ಟಿಸಿರುವುದಕ್ಕೆ ಚಾರಿತ್ರಿಕ ದಾಖಲೆಗಳಿವೆ. ಕೊನೆಯಲ್ಲಿ ವಿಜಯನಗರದ ಅರಸರು ಇಲ್ಲಿನ ವಸಂತ ಮಂಟಪ ಹಾಗೂ ತುಲಾಭಾರ ಮಂಟಪಗಳನ್ನು ನಿರ್ಮಿಸಿ ಈ ಸ್ಥಳದ ಭವ್ಯತೆಯನ್ನು ಹೆಚ್ಚಿಸಿದರು.

ನಂದಿಗ್ರಾಮ ಇರುವ ಪರಿಸರ ಬಹು ಸುಂದರ. ನಂದಿ ಬೆಟ್ಟವೊಂದೇ ಅಲ್ಲದೇ ಬ್ರಹ್ಮಗಿರಿ, ವಿಷ್ಣುಗಿರಿ, ಸ್ಕಂದಗಿರಿ ಮತ್ತು ದಿವ್ಯಗಿರಿಗಳೆಂಬ ಐದು ಬೆಟ್ಟಗಳು ಈ ಹಳ್ಳಿಯನ್ನು ಸುತ್ತುವರಿದಿವೆ. ಪಿನಾಕಿನಿ, ಪಾಲಾರ್, ಪಾಪಾಗ್ನಿ, ಅರ್ಕಾವತಿ ಹಾಗೂ ಸುವರ್ಣಮುಖಿ ಎಂಬ ಐದು ನದಿಗಳು ಈ ದಿವ್ಯಕ್ಷೇತ್ರವನ್ನು ಪಾವನಗೊಳಿಸಿವೆ. ದೇವಸ್ಥಾನ ನೋಡುವುದಕ್ಕೆ ನಮ್ಮ ಜೊತೆಗೆ ಸುಭಾಷ್ ಕೂಡ ಬಂದಿದ್ದ. ವಸಂತಮಂಟಪದ ಬಳಿ ಬಂದಾಗ, ''ಕೊನೆಗೂ ಇಲ್ಲಿ ಮದುವೆ ಮಾಡೋಕ್ಕೆ ಪರವಾನಗಿ ಸಿಕ್ತಣ್ಣಾ'' ಅಂತ ಪ್ರಕಾಶನಿಗೆ ಹೇಳಿದ. ನನ್ನ ಮುಖದಲ್ಲಿದ್ದ ಪ್ರಶ್ನಾರ್ಥಕ ಚಿಹ್ನೆ ನೋಡಿ ಪ್ರಕಾಶ್, ''ನಮ್ಮ ಸೋದರಮಾವನ ಮೊಮ್ಮಗನ ಮದುವೆ ನಿಶ್ಚಯವಾಗಿದೆ. ಅವನು ಮದುವೆ ತನ್ನ ಹಳ್ಳಿಯಲ್ಲೇ ಆಗಬೇಕು. ಅದೂ ಈ ವಸಂತಮಂಟಪದಲ್ಲೇ ಆಗಬೇಕು ಅಂತ ಹಟಹಿಡಿದ. ನಮ್ಮ ಮಾವ ಕಷ್ಟಪಟ್ಟು ಇದಕ್ಕೆ ಪರವಾನಗಿಯನ್ನ ಸಂಬಂಧಪಟ್ಟವರಿಂದ ಪಡೆದಿದ್ದಾರೆ'' ಅಂತ ವಿವರಿಸಿದ.

ಭೋಗನಂದೀಶ್ವರ ದೇವಸ್ಥಾನ ಚೋಳರಕಾಲದಲ್ಲಿ ಕಟ್ಟಿದ್ದು. ಈ ವಿಗ್ರಹ ಪರಶಿವನ ತಾರುಣ್ಯವನ್ನು ಪ್ರತಿನಿಧಿಸುತ್ತದೆಯಂತೆ. ದೇವಸ್ಥಾನದ ಒಳಾಂಗಣದಲ್ಲಿ ಅನೇಕ ಸುಂದರ ಕೆತ್ತನೆಕೆಲಸಗಳನ್ನು ನೋಡಬಹುದು. ಇಲ್ಲಿನ ಸೂರಿನಲ್ಲಿ ರಾಜೇಂದ್ರಚೋಳನ ಪ್ರತಿಮೆಯನ್ನು ಬಹು ಕಲಾತ್ಮಕತೆಯಿಂದ ಮೂಡಿಸಿದ್ದಾರೆ.

ದೇವಸ್ಥಾನ ನೋಡಿ ಹೆಬ್ಬಾಗಿಲಿನಿಂದ ಹೊರಬರುವಾಗ ನಮಗೆ ಅಡ್ಡಲಾಗಿ ರಸ್ತೆಯುದ್ದಕ್ಕೂ ಒಂದು ದೊಡ್ಡ ಮೋರಿಯನ್ನು ತೋಡಿದ್ದರು. ಅದನ್ನು ದಾಟಿ ಮುಂದೆ ನಡೆದಾಗ ರಸ್ತೆಯ ಆಚೆಬದಿಯ ಮನೆಯ ಗೇಟಿನಲ್ಲಿ ವೃದ್ಧರೊಬ್ಬರು ನಿಂತಿದ್ದರು. ಪ್ರಕಾಶ ''ಇವರು ನಮ್ಮ ಮಾವ'' ಅಂತ ಅವರನ್ನು ನನಗೆ ಪರಿಚಯಿಸಿದ. ಅವರು ನಮ್ಮನ್ನು ಬಹು ಆದರದಿಂದ ಮನೆಯೊಳಗೆ ಬರಮಾಡಿಕೊಂಡರು. ಪ್ರಕಾಶನೇ ಎಪ್ಪತ್ತನ್ನು ದಾಟಿರುವಾಗ ಅವನ ಮಾವನಿಗೆ ನೂರುವರ್ಷವಾದರೂ ಆಗಿರಬೇಕು ಅನ್ನಿಸಿ ಪ್ರಕಾಶನನ್ನೇ ಅವರ ವಯಸ್ಸಿನ ಬಗ್ಗೆ ಪಿಸುಮಾತಿನಲ್ಲಿ ಕೇಳಿದೆ. ''ಎಂಭತ್ತಮೂರು'' ಅಂತ ಪ್ರಕಾಶ ಪಿಸುಮಾತಿನಲ್ಲೇ ಹೇಳಿದ. ಮುದುಕರ ಕಿವಿ ಚುರುಕಾಗಿತ್ತು. ''ಆದರೂ ನೋಡಿ ಹೇಗಿದ್ದೀನಿ'' ಅಂತ ಹೇಳಿ ನಸುನಕ್ಕರು.

ನಾನು ಲೋಕಾಭಿರಾಮವಾಗಿ ಮಾತು ಬೆಳಸುವ ಉದ್ದೇಶದಿಂದ, ''ಮೊಮ್ಮಗನಿಗೆ ಮದುವೆಯಂತೆ?'' ಎಂದೆ.

''ಹೌದು, ಅವನು ಇದೇ ಊರಿನಲ್ಲೇ ತನ್ನ ಮದುವೆ ಆಗಬೇಕು ಅಂದ. ಸರಿ ಅಂದೆ. ಮದುವೆ ದೇವಸ್ಥಾನದಲ್ಲಿರೋ ವಸಂತ ಮಂಟಪದಲ್ಲೇ ಆಗಬೇಕು, ಮದುಮಗಳು ತನ್ನ ಭರತನಾಟ್ಯ ಪರಿಣತಿಯನ್ನ ಅಲ್ಲಿ ನರ್ತಿಸಿ ತೋರಿಸುತ್ತಾಳೆ ಅಂತ ಹೇಳಿದ. ಅದಕ್ಕೂ ಹ್ಞೂ ಅಂದು ಡಿಪಾರ್ಟ್‌ಮೆಂಟಿನಿಂದ ವಸಂತಮಂಟಪದ ಬಳಕೆಗೆ ಪರವಾನಗಿ ಗಿಟ್ಟಿಸಿದೆ. ತಾನು ಮದು ಮಂಟಪಕ್ಕೆ ಸಿಂಗರಿಸಿದ ಜೋಡೆತ್ತಿನ ಗಾಡೀಲೇ ಬರ್ತೀನಿ ಅದನ್ನೂ ಸಿದ್ಧಪಡಿಸಿ ಅಂತ ಅಹವಾಲು ಮಾಡಿದ. ಗಾಡೀನೇನೋ ಹೊಂದಿಸಬಹುದು. ಆದರೆ ದೇವಸ್ಥಾನದ ಮುಂದೆ ಓ.ಎಫ್.ಸಿ. ಕಾಲುವೆ ತೋಡಿಬಿಟ್ಟಿವ್ರಲ್ಲಾ ಗಾಡಿ ಹೇಗೆ ದಾಟಿಸೋದು ಅಂತೀನಿ'' ಅಂದ್ರು ಯಜಮಾನರು.

ಇದೇನು ಓ.ಎಫ್.ಸಿ. ಕಾಲುವೆ? ನನಗೆ ಅರ್ಥ ಆಗಲಿಲ್ಲ, ಸಾಮಾನ್ಯವಾಗಿ ಇಂತಹ ಪರಿಸ್ಥಿತಿಯಲ್ಲಿ ನಾನು ವಿವರವಾಗಿ ಪ್ರಶ್ನಿಸೋದಕ್ಕೆ ಹೋಗೋದಿಲ್ಲ, ನನಗೆ ಸರಿಯಾಗಿ ಕೇಳಿಸಿಲ್ಲದಿರಬಹುದು, ವೃಥಾ ಅಜ್ಞಾನದ ಪ್ರದರ್ಶನ ಯಾಕೆ ಅಂತ ಸುಮ್ಮನಾಗ್ತೀನಿ. ಆದರೆ ಇವತ್ತು ಯಾಕೋ ಕೇಳೋಣ ಅನ್ನಿಸ್ತು.

''ಓ.ಎಫ್.ಸಿ. ಅಂದ್ರೆ?'' ಅಂತ ಕೇಳೇ ಬಿಟ್ಟೆ.

''ಆಪ್ಟಿಕಲ್ ಫೈಬರ್ ಕೇಬಲ್ ಅಂತ ಕೇಳಿಲ್ವಾ ನೀವು, ಬೆಂಗಳೂರಿನಲ್ಲಿ ಅವೆಲ್ಲಾ ಇರಬೇಕಲ್ಲಾ'' ಅಂತ ಹೇಳಿದರು. ಇವನೆಂಥ ಇಂಜಿನಿಯರ್ ಅಂತ ಅವರು ಅಂದುಕೊಂಡಿರಬಹುದು.

ಖಂಡಿತಾ ಕೇಳಿದ್ದೀನಿ. ಆದರೆ ಇಂತಹ ಕುಗ್ರಾಮದಲ್ಲಿ ಅದನ್ನ ಹಾಕ್ತಾರೆ ಅಂತ ನೆನೆಸಿರಲಿಲ್ಲ ಅಂತ ನಾನು ಹೇಳಲಿಲ್ಲ. ಮಾತು ಬದಲಾಯಿಸಿ,

''ಹುಡುಗಿ ಯಾರ ಕಡೆ? ನೀವೇ ವ್ಯವಸ್ಥೆ ಮಾಡಿದ್ರೋ ಅಥವಾ ಅವನೇ ನೋಡಿಕೊಂಡಿರೋದೋ?'' ಅಂತ ಕೇಳಿದೆ.

''ಅದು ಎಲ್.ಟಿ. ಸ್ವಾಮಿ'' ಅಂತ ತಣ್ಣಗೆ ಹೇಳಿದರು.

ಅಷ್ಟುಹೊತ್ತಿಗೆ ಸುಭಾಷ್ ನಮಗೆಲ್ಲಾ ಟೀ ತಂದುಕೊಟ್ಟ. ಗೇಟಿನ ಬಳಿ ಏನೋ ಸದ್ದಾಯಿತು ಅಂತ ಮಾವ ಎದ್ದುಹೋದರು. ಇದೇ ಸಮಯ ಅಂತ ನಾನು ಪ್ರಕಾಶನನ್ನ ''ಎಲ್.ಟಿ. ಅಂದರೇನೋ? ನಿಮ್ಮ ಮಾವ ಬರೀ ಅಬ್ರೀವಿಯೇಷನ್ಸೇ ಬಳಸ್ತಾರಲ್ಲಾ'' ಅಂತ ಕೇಳಿದೆ.

''ಎಲ್. ಟಿ. ಅಂದ್ರೆ ಲಿವಿಂಗ್ ಟುಗೆದರ್ ಅಂತ. ಅಷ್ಟೆಲ್ಲಾ ಇಂಗ್ಲೆಂಡಿಗೆ ಹೋಗಿ ಬರ್‍ತೀಯಾ ಲಿವಿಂಗ್ ಟುಗೆದರ್ ಗೊತ್ತಿಲ್ವಾ'' ಅಂತ ಲೇವಡಿ ಮಾಡಿದ.

ಟೀ ಕುಡಿದು ಪುನಃ ತೋಟಕ್ಕೆ ಹೋಗಿ ಊಟ ಮಾಡಿ, ಸಿಯೆಸ್ಟಾ ಮುಗಿಸಿ ಬೆಂಗಳೂರಿಗೆ ಹೊರಟೆವು.

ಅಂದಹಾಗೆ ನಮ್ಮ ಪ್ರಕಾಶನ ಸೃಜನಶೀಲತೆಯ ಪರಿಚಯ ಪಡೆಯಬೇಕು ಅನ್ನಿಸಿದರೆ ಖಂಡಿತ ಅವನ ಬ್ಲಾಗ್‌ನ ಸಂದರ್ಶಿಸಿ

ಅದರ ವಿವರ ಹೀಗಿದೆ. nandiprakash.blogspot.com ಅಥವಾ innovator Prakash (Home) ಅನ್ನು googleನಲ್ಲಿ ನಮೂದಿಸಿ. ಒಂದು ಹೊಸ ಪ್ರಪಂಚ ನಿಮ್ಮ ಮುಂದೆ ತೆರೆದುಕೊಳ್ಳುತ್ತೆ.

**ಶಿವಕುಮಾರ್**

---

ಕೂಲಿ ಕೆಲಸದವರು ಬೇಕಾಬಿಟ್ಟಿ ಕೆಲಸ ಮಾಡುತ್ತಿದ್ದರು.
ಇದು ಕಂಟ್ರಾಕ್ಟರನಿಗೆ ಬಹಳ ತಲೆನೋವಾಗಿತ್ತು.
ಅದಕ್ಕೆ ಕೂಲಿಯವರಿಗೆ ಸರಿಯಾದ ಸಲಹೆ ಕೊಡೋಣ
ಅಂದುಕೊಂಡು ಒಂದು ದಿನ ಒಬ್ಬ ಕಂಟ್ರಾಕ್ಟರು ಕೂಲಿಯವನಿಗೆ
'ಏಯ್ ಇಲ್ಲಿ ಗುಂಡಿ ತೋಡಿದ ಮಣ್ಣನ್ನು ಎಲ್ಲೆಂದರಲ್ಲಿ ಹಾಕಬೇಡ'
ಅಂದು ಎಚ್ಚರಿಸಿದ. ಅದಕ್ಕೆ ಕೂಲಿ ಆಳು ಹಾಗಾದ್ರೆ
ಗುಂಡಿ ತೆಗೆದ ಮಣ್ಣು ಎಲ್ಲಿ ಹಾಕ್ಲಿ ಅಂತ ಕೇಳಿದರೆ
ಇನ್ನೊಂದು ಗುಂಡಿ ತೋಡಿ ಅದರಲ್ಲಿ ಹಾಕು ಅಂದ.


- **ಸುಕೇಶವ**




## ಆರ್.ಕೆ. ಲಕ್ಷ್ಮಣ್‌ಗೆ ತೊಂಭತ್ತರ ಹುಟ್ಟುಹಬ್ಬ

ಕೊರವಂಜಿಯ ಹುಟ್ಟಿನಿಂದಲೂ ಆ ಪತ್ರಿಕೆಗೆ ವ್ಯಂಗಚಿತ್ರಗಳನ್ನು ಬರೆದು ಶ್ರೀಮಂತಗೊಳಿಸಿದ ಆರ್.ಕೆ. ಲಕ್ಷ್ಮಣ್‌ಗೆ ತೊಂಭತ್ತು ತುಂಬಿದೆ. ಈ ಶುಭಸಂದರ್ಭದಲ್ಲಿ ಕೊರವಂಜಿ, ಅಪರಂಜಿ ಬಳಗದ ಎಲ್ಲರ ಪರವಾಗಿ ಶ್ರೀಯುತರಿಗೆ ನಮ್ಮ ಶುಭಹಾರೈಕೆಗಳನ್ನು ಈ ಮೂಲಕ ಸಲ್ಲಿಸುತ್ತಿದ್ದೇವೆ.

**ಸಂಪಾದಕ ಮಂಡಲಿ, ಅಪರಂಜಿ.**



" ಅದರ ಹತ್ರ ಹೋಗ್ಬೇಡ ಕಣೋ. ನೆನ್ನೆ ನಮ್ತಂದೆನ ಕಚ್ಬಿಡ್ತಂತೆ.!
ಅವರು ಹೇಳ್ತಾ ಇದ್ರು. "

ರಾಜ್ಯೋತ್ಸವ ವಿಶೇಷ

# ಏಸೊಂದು ನಮೂನಿ ಕನ್ನಡಗಳು!

– ಕುಂ. ವೀರಭದ್ರಪ್ಪ

**ಕ**ಥಿ, ಕಾದಂಬರಿಗಳೊಳಗೆ ಭಾಷೆಯನ್ನು ಹೆಂಗ ಬಳಕೆ ಮಾಡುವಿ ಅಂತ ಕೇಳಿ ನನ್ನನ್ಯಾಕೆ ಫಜೀತಿಗೆ ಕೆಡವಿದರಿ? ಇದಕ ಏನೂಂತ, ಹೇಗಂತ ಹೇಳೂದು! ಯಾವ್ಯಾವ ಪಿಜ್ಜಾ, ಬರ್ಗರ್ ವಗೈರೆ ತಿಂಡಿಗಳನ್ನು ಹೆಂಗ ಮಾಡುವಿ ಅಂತ ಕೇಳಿದರ ಫೆವ್ ಸ್ಟಾರ್ ಹೋಟಲ್ಲಿನ ಅಡುಗೆಯವ ಅರಳುರಿದಂತೆ ಹೇಳಿದಷ್ಟು ಸುಲಭವಲ್ಲರೀ, ಹಳ್ಳಿ ಹೆಣುಮಗಳು ಕಟುಗರೊಟ್ಟಿ, ಗಡಸೊಪ್ಪು, ಅಂಬಳಿ, ಗಟ್ಟಿಬ್ಯಾಳಿ, ಮುದ್ದೆ ಹೆಂಗ ಮಾಡುವೆನಂತ ಹೇಳುವುದು! ಆಕಿ, 'ಹೋಗಿರಿ ಎಪ್ಪಾ ಹೇಳಲಕ ನನಗ ನಾಚಿಕೆಯಾಗತದ' ಎಂದು ಹೇಳುವಳೇ ಹೊರತು ಅಪ್ಪಿತಪ್ಪಿ ಬಾಯೀನ ಬಿಡೋದಿಲ್ಲ. ಹಂಗಾನ ನಮ್ಮಂಥೋರ ಪರಿಸ್ಥಿತಿ. ಯಾಕಂದರ ನನ್ನ, ನನ್ನಂಥ ಹಳ್ಳಿಗಾಡ ಮಂದಿ ಬರೆಯೋ ಕಥಿ, ಕಾದಂಬರಿಗೋಳು ಒಂದು ನಮೂನಿ ಹಳ್ಳಿ ಅಡುಗೆ ದಿನಿಸು ಗಳಿದ್ದಾಂಗ. ಅವುಗಳನ್ನು ಏನೇನು ಹಾಕಿ ಬರಿತೀಂತ ಕೇಳಿದರ ಪಟ್ಟಣದ ಮಂದಿ ಹೇಳಿದಷ್ಟು ಸಲೀಸಲ್ಲ. ಆದ್ದರಿಂದ ನಮಗ ಭಾಷೆ ಅಂದರೇನೆ ಒಂಥರಾ ನಾಚಿಕೆ, ಸಂಕೋಚ. ನಮ್ಮ ಕಡೀ ಮುಂದೀನ ಊಟಾಯಿತೇನು ಅಂತ ಕೇಳಿದರಂದರ 'ಅದ್ಯಾವ ಊಟಾನೋ ಎಪ್ಪಾ' ಎಂದು ಮುಖಾನ ಸೊಟ್ಟ ಮಾಡತಾರ. ಏನೇನು ಉಂಡೀಂತ ಕೇಳಿದರ, 'ಉಂಡೆನೋ ತಂದಿ, ನಾವೇನು ನಿಮ್ಮಂಗ ಗವರಮೆಂಟನ ಸಂಬಳ ತಿಂಬೋರಲ್ಲ, ಛಲಛಲೋದು ಉಂಡಿವಿ ಅಂತ ಹೇಳಲಕ, ಏನೆನಂದರ ಅನ್ನ ಸಾರು ಉಂಡಿವಿ, ಮ್ಯಾಲೀಸು ನೀರು ಕುಡಿದೆವಿ' ಅಂತ ಹೇಳತಾರ್ರೀ! ಅದಕ ನನಗ ಭಾಷೆ ಎಂಬುದು ಭಾಷೆಯಲ್ಲ, ಅದು ಜ್ಯೋತಿರ್ಲಿಂಗದಂಥ ಮಾತು. ಮಾತೆಂದರ ಮಾತಲ್ಲ, ಅದೊಂದು ಶಬುದ, ಸಂಭಾಷಣೆಯ ನುಡಿಯ ವರ್ತಿಸಿ ನುಡಿವ ಶಬುದ, ತೊಡಹದ ಕೆಲಸದ ಬಣ್ಣದಾಂಗ, ಕಡಿಹಕ್ಕಾಗಲೀ, ಒರೆಗಾಗಲೀ ಬಾರದ ಶಬುದ, ಅದು ನನ್ನ ಮನದಲ್ಲೊಂದಾಗಲೀ, ಹೃದಯದಲ್ಲೊಂದಾಗಲೀ, ವಚನದಲ್ಲೊಂದಾಗಲೀ ಇರದ ಏಕಮುಖ ರುದ್ರಾಕ್ಷಿಯಂಥ ಮಾತು! ನಮ್ಮ ಕಥಿ, ಕಾದಂಬರಿಗಳಲ್ಲಿರುವ ಮಾತಿಗೂ, ಶ್ರೋತೃವಿನ ಸುಖಕ್ಕೂ ನಡುವೆ ಫರಕಿಲ್ಲ ಕಣಣ್ಣಾ! ನಾವಾಡೋ ಮಾತಿಗೆ ನಯ ನಾಜೂಕಾಗಲೀ, ಅದು ಅಂತರಂಗದಲ್ಲೊಂದಾಗಲೀ, ಬಹಿರಂಗದಲ್ಲೊಂದಾಗಲೀ ಬಿಲ್‌ಕುಲ್ ಇಲ್ಲವೇ ಇಲ್ಲ, ಏಕ್ ಮಾರ್ ದೋ ತುಕುಡಾ ಅಂತಾರಲ್ಲ ಅದೂನೂ ಹಂಗೇನೆ!

**ನಮ್ಮ ಸಾಹಿತ್ಯದೊಳಗೂ ನಾನಾ ನಮಾನಿ ಭಕ್ಷ್ಯಭೋಜ್ಯಗಳು ಒಬ್ಬೊಬ್ಬರದ್ದು ಒಂದೊಂದು ರುಚಿ**

ನಮ್ಮ ನಾಡನ್ನಾಳುವ ಮಂದಿ ಕನ್ನಡ ಮಾತನ್ನುಳಿಸುವ ಸಲುವಾಗಿ ಅಭಿರುದ್ಧಿ ಪ್ರಾಧಿಕಾರ ಎಂಬ ಹೆಸರಿನ ಗಂಜಿ ಕೇಂದ್ರ ತೆರೆದಿರುವರು ತಾನೆ! ಅದೊಂದು ಫಂಕ್ಷನ್ನನ ಮಾಡ್ತು, ಕರೆದರೂಂತ ನಾನೂನು ಹೋಗಿದ್ದೆ ಕಣಣ್ಣಾ. ಕನ್ನಡಾನ ಹೆಂಗ ಬೆಳಸಬೇಕು, ಹೆಂಗ ಉಳಿಸಬೇಕೂಂತ ಜಂತುವಾನ ಹಿಡದಂಗ ಮಾತಾಡಿದೋರೆಲ್ಲ ತಮತಮ್ಮ ಹಳ್ಳಿಯೊಳಗ ಹುಟ್ಟಿ ಕೆಡದೇನೆ ಪಟ್ಟಣ ಸೇರಿ ಆರಾಮಾಗಿರೋ ಪ್ರೊಪೆಸರ ಮಂದಿ. ಹಳ್ಳಿ ಬದುಕನ್ನ, ಹಳ್ಳಿ ಮಾತನ್ನ ಜೋಕು ಮಾಡಿ ಹೊಟ್ಟಿಯೊಳಗ ಹುಣ್ಣು ಮೂಡುವಾಂಗ ನಗಿಸೋ, ತಿಕಬಡದು ನಗಾಡೋ ಮಂದಿ, ನನ್ನ ಪಾಳಿ ಬಂದಾಗ ನಾನು, 'ಅದೆಂಗರಪ್ಪಾ ನೀವು ಕನ್ನಡಾನ ಉಳಸವರು, ಬೆಳಸವರು! ಅದನ್ನು ಉಳಿಸಿ ಬೆಳೆಸುವವರು ತಮತಮ್ಮ ಹಳ್ಳಿಯೊಳಗ ತಮತಮ್ಮ ಪಾಡಿಗೆ ತಾಮದಾರ, ಅವರ್‍ಯಾರೂ ನಮನಿಮ್ಮ ತಂಟೆಗೆ ಬರೋರಲ್ಲ, ನಮನಿಮ್ಮ ಬದುಕನ್ನು ಜೋಕು ಮಾಡಿ ನಗೋರಂತೂ ಮೊದಲೇ ಅಲ್ಲ. ಖರೇವಂದರೂ ಅವರು ಕನ್ನಡಾಭಿರುದ್ಧಿ ಪ್ರಾಧಿಕಾರದ ಛೇರುಮನ್ನರು, ಮೆಂಬರುಗಳು ಕಣರಣ್ಣಾ, ನಾವು ನೀವೆಷ್ಟಿದ್ದರೂ ಅವರ ಮಾತನಿಂಜಲನ್ನ ಉಂಡು ಬದುಕುತ್ತಿರೋರು ಎಂಬುವ ಸತ್ಯಾನ ಮರತರ ಅವ ಮೆಚ್ಚಾಕ್ಕಿಲ್ಲ' ಅಂತ ಗಿಣಿಗೆ ಹೇಳಿದಾಂಗ ಆರಕೆ ಮಾಡಿಕೊಂಡೆ ಕಣಣ್ಣಾ. ಹಳ್ಳಿ ಊರುಗಳೊಳಗ ಹುಟ್ಟಿ ಅಲ್ಲೇ ಕಾಲಾಯಾಪನೆ ಮಾಡುತಾ ಇರೋ, ಅವರ ಜವಾರಿ ಮಾತನ್ನ, ಕನ್ನಡಿಹಳ್ಳದಂಥ ಬದುಕನ್ನ ಕಥಿ, ಕಾದಂಬರಿಗಳೆಂಬುವ ಕಾಲಕೋಶದೊಳಗ ಸ್ಟಾಕು ಮಾಡುತಿರುವ, ಬೆಂಗಳೂರುಗಳಂಥ ಪಟ್ಟಣಗಳಿಗೆ ಹಿಂಗ ಬಂದು ಹಂಗ ಹೋಗುತಿರುವ, ಸತ್ತ ಮ್ಯಾಲ ಮಣ್ಣಾಗ್ಗಲಕ ಅಲ್ಲೇ ಮೂರು ಮೊಳದುದ್ದದ, ಎಲ್ಡು ಮೊಳದಗಲದ ಜಾಗ ನೋಡಿಕೊಂಡಿರೋ ನನ್ನಂತ ಅನುವಾದಕರು (ಯಾವುದೇ ಲೇಖಕ ತನ್ನ ಕೃತಿಗಳಲ್ಲಿ ಅನುಭವಜನ್ಯ ಬದುಕನ್ನು ಮರು ಜೇವಣಿಗೆ ಮಾಡುವುದೂ ಅನುವಾದವೆ) ಕನ್ನಡ ಮಾತನ್ನ ಉಳಿಸಿ ಬೆಳೆಸುವವರೇ ಹೊರತು ಪೇಯಿಂಗು ಗೆಸ್ಟುಗಳ ರೀತಿ ಹಳ್ಳಿಗೆ ವಿಜಿಟ್ಟು ಕೊಟ್ಟು ಹೋಗುವ ಟಾಡಾ (ಟಿಎ+ಡಿಎ) ಅಧಿಕಾರಿಗಳಂಗಿರೋ ನೀವಲ್ಲವೇ ಅಲ್ಲವೆಂದು ಹೇಳಿದೆ. ಅದಕ್ಕವರು ತಮ್ಮ ಮೋರೆಗಳನ್ನು ಸೊಟ್ಟ ಮಾಡಿಕೊಂಡರು ಕಣಣ್ಣಾ! ಈ ಮುಠ್ಠಾಳನನ್ನ ಕರದು ಕೇರು ಬಡಿಸಿಕೊಳ್ಳಬಾರದಿತ್ತೆಂದು ಪರದೆ ಹಿಂದೆ ಆಡಿಕೊಂಡಿದ್ದು ಕಿವಿಗೆ ಬಿತ್ತು. ಇದ್ದದ್ದು ಇದ್ದಂಗ ಹೇಳಿದರ ಸಿದ್ದಪ್ಪಗೆ ಸಿಡಿಲು ಬಡಿತಂತೆ ಎಂಬ ಗಾದೆ ಮಾತು ನೆಪ್ಪಾಯಿತಾಗ. ಹಿಂದೊಮ್ಮೆ ವಾರಣಾಸಿಯೊಳಗೆ ಖ್ಯಾತ ಕಥೆಗಾರ ಕಾಶಿನಾಥ ಸಿಂಗ್, ಇವರು ಬಿಟ್ಟು ಇನ್ಯಾವ ಲೇಖಕರದಾರ ಕನ್ನಡ ಸಾಹಿತ್ಯದೊಳಗಂತ ಕೇಳಿದರು. ಅದಕ್ಕ ನಾನು ಕಂಬಾರ, ಚಂಪಾ, ಖಾಸನೀಸ, ಮಹಾದೇವ, ರಾಘವೇಂದ್ರ ಪಾಟೀಲರಂಥೋರದಾರಂತ ಜವಾಬು ನೀಡಿದೆ. ಅದಕ್ಕವರು ಅಂದಮ್ಯಾಲ ಅವರ್‍ಯಾಕ ಹಿಂದಿ ಮಂದಿಗೆ ಪರಿಚಯವಾಗಿಲ್ಲಾಂತ ಕೇಳಿದ್ದಕ್ಕೆ ನಾನು, ನಿಮ್ಮ ರಾಜ್ಯದೊಳಗ್ಯಾಂಗ ಮೈಥಿಲಿ, ಭೋಜಪುರಿಯಂಥ ದೇಸೀಯ ಭಾಷೆಗಳದಾವೋ ಹಂಗ ನಮ್ಮ ಕನ್ನಡದೊಳಗ ನಮನಮೂನಿ ಮಾಬೆರಕಿ ಕನ್ನಡಗಳದಾವ, ಅವುಗಳನ ಅನುವಾದ ಮಾಡೋರಿಗೆ ಏಳೆಂಟೆದೆ ಬೇಕೆಂದು ಸಮಜಾಯಿಷಿ ನೀಡಿದೆ.

ಅರೆ ಹೌದಲ್ಲ! ಏಸೊಂದು ನಮೂನಿ ಕನ್ನಡಗಳಾದವ ನಮ್ಮ ರಾಜ್ಯದೊಳಗ! ಒಂದು ಇನ್ನೊಂದಕ್ಕಿಂತ ಛಂದ! ಇವುಗಳೊಂದೊಂದೂ ಸಾವಜಿ ಖಾನಾವಳಿಗಳಿದ್ದಂಗ, ಯಾವುದನ್ನ ತಿನ್ನುವುದು, ಯಾವುದನ್ನು ಬಿಡುವುದು! ಒಂದೊಂದೂ ಬಾಯೊಳಗೆ ನೀರೂರಿಸುವ ಖಾದ್ಯವೆ! ಹಂಗಾನ ನಮ್ಮ ಸಾಹಿತ್ಯದೊಳಗೂ ನಾನಾ ನಮೂನಿ ಭಕ್ಷ್ಯಭೋಜ್ಯಗಳು. ಒಬ್ಬೊಬ್ಬರದ್ದು ಒಂದೊಂದು ರುಚಿ. ಅವರಂಗ ನನ್ನ ಖಾನಾವಳ್ಯಾಗೂ ತರಾವರಿ ಜವಾರಿ ಖಾದ್ಯಗಳು, ಇದು ಬಳ್ಳಾರಿ ಕನ್ನಡ, ಇದು ಕೊಟ್ಟೂರು ಕನ್ನಡ, ಇದು ಆಂಧ್ರದ ಗಡಿ ಸೀಮೆಯ ಕನ್ನಡ! ಇನ್ನೊಂದು ನಾನೇ ತಯಾರಿಸಿರೋ ಸ್ಪೆಷಲ್ ಕನ್ನಡ! ನನ್ನ ಕನ್ನಡದೊಳಗ ಉಪ್ಪು, ಹುಳಿ, ಖಾರ ಜಾಸ್ತಿ. ಅದೂ ಅಲ್ಲದ ಖಡಕ್ಕನ್ನಡ ಬೇರೆ! ಎಂಟು ಹೋಳಿಗೆ ತಿನ್ನುವುದಕ್ಕಿಂತ ಒಂಟಿ ಎಲುಬು ಕಡಿ ಎಂಬ ಗಾದೆ ಮಾತು ಚಲಾವಣೆಯಲ್ಲಿರುವುದು ನಮ್ಮಂಥವರಿಂದಾಗಿಯೇ! ಸ್ಟಾರೋಟಲುಗಳೊಳಗೆ ಟೇಬಲುಗಳ ಮ್ಯಾಲ ಭಳಾರೆ ವಿಚಿತ್ರಂ ಎಂಬಂತೆ ಕೂತು ಫೋರ್ಕು, ಚಮಚಗಳ ನೆರವಿನಿಂದ ಒಂದೆರಡು ತೊಲ ಇಡಲಿಯನ್ನು ತಿಂದು, ಅರ್ಧ ಔನ್ಸು ಕಾಫಿಯನ್ನು ಕುಡಿದು ಆಹ್ಹಾ ಎಂದು ಹೊಗಳಿದಷ್ಟು ಸಲೀಸಲ್ಲ ನಮ್ಮ ಸಾವಜಿ ಖಾನಾವಳೀಲಿ ಲಗಾಯಿಸುವುದು! ತಾಟನು ಮುಂದಿಟುಕೊಂಡು ಸುಮಸುಮ್ಮನ ಕಡಕೋತ ಕುಂಡರಬೇಕು, ಆವಾಗ ಅಕ್ಷರದ ಗೊಂಗಡಿಯೊಳಗಿನ ಖಾದ್ಯಗಳ ರುಚಿ ತಿಳೀತದ. ಅದು ಬಿಟ್ಟು ಅದಿಂಗಿರಬೇಕಾಗಿತ್ತು. ಇದಂಗಿರಬೇಕಾಗಿತ್ತು ಎಂದು ವಸಿಷ್ಠರ ಥರ ಹೇಳೋದಲ್ಲ, ಅದರದ್ದು ಅದಕ, ಇದರದ್ದು ಇದಕ, ವಿಶ್ವಾಮಿತ್ರ ಪರಂಪರೆಯವರಾದ ನಾವಿರೋದೆ ಹಿಂಗ ನೋಡಿ ಸೋಮಿ!

**ಸೌಜನ್ಯ: ಪ್ರಜಾವಾಣಿ ಸಾಹಿತ್ಯ ಪುರವಣಿ**

✵

---

ಒಬ್ಬರು ನಾಯಿ ಕರ್‍ಕೊಂಡು ಜ್ಯೋತಿಷಿ ಹತ್ತಿರ ಹೋದರು. ಜಾತಕ ತೋರಿಸಬೇಕಿತ್ತು, ಅಂದ್ರೆ ನಾಯಿದಾ ಅಂತ ಕೇಳಿದರು. ಅಲ್ಲ ಸಾರ್ ನನ್ನ ಮಗಳದ್ದು ಅಂದರು. ಅದಕ್ಕೆ ನಾಯಿನ ಯಾಕೆ ಕರ್‍ಕೊಂಡು ಬಂದ್ರಿ ಅಂತ ಕೇಳಿದರು. ಅದಕ್ಕೆ ಅವರು ನಿಮ್ಮನೆ ತೋರಿಸಿದ್ದು ಈ ನಾಯಿನೇ. ನೀವು ಜಾತಕ ನೋಡಿ ಹೇಳಿದರೆ ಒಳ್ಳೇದಾಗ್ತಿತ್ತು. ಅದೂ ಅಲ್ದೆ ಈ ನಾಯಿಗೆ ಸಮಾಗಮ ಯೋಗ ಇದೆ ಅಂತ ನೀವೇ ಹೇಳಿದ್ದು. ಈಗ ಇದು ಮೂರು ಮರಿಗಳಿಗೆ ತಾಯಿ ಅಂದರು.

- **ಸುಕೇಶವ**

# ಹಾರದಿಂದ ಅಗ್ರಹಾರದವರೆಗೆ...

**- ಗಣೇಶ ಹೆಗ್ಗಡೆ**

**ಸದಾ ಜಾಮೂನು ತಿನ್ನುತ್ತಿದ್ದವರು ಜಾಮೀನಿಗಾಗಿ**
**ವಕೀಲರ ಕಾಲನ್ನು ಹಿಡಿಯುವ ದೃಶ್ಯ ರೋಚಕವಲ್ಲವೆ?**

**ಎಂ**ದಿನಂತೆ ನಾನು ಮತ್ತು ಪ್ರೊ॥ ತೋಲಾಂಡರಾಯರು ವಾಕಿಂಗೆಂದು ಹೊರಟಾಗ ಸಂಜೆ ಮಬ್ಬುಗತ್ತಲು ಸಮೀಪಿಸುತ್ತಿತ್ತು. ''ಸರ್, ಇವತ್ತು ಶಾನೆ ಲೇಟಾಗಿ ಹೋಯ್ತು. ಕೊಂಚ ಬ್ಯಾಗ ಬ್ಯಾಗ ಹೆಜ್ಜೆ ಹಾಕಿ'' ಎಂದೆ.

''ಯಾಕಯ್ಯಾ, ಇಷ್ಟು ಭಯ ಬೀಳ್ತಿ? ವಾಕಿಂಗಿಗೆ ಹೊರಟಾಗ ಮನಸ್ಸು ಯಾವಾಗ್ಲೂ ಪ್ರಶಾಂತವಾಗಿರ್ಬೇಕು'' ಎಂದಿನಂತೆ ಅಡ್ವೈಸಿಸಿದರು.

''ಯಾಕೂ ಇಲ್ಲ ಸರ್, ರಾಜ್ಯದಲ್ಲಿ ಭೀಕರ ವಿದ್ಯುತ್ ಕ್ಷಾಮವುಂಟಾಗಿದೆ. ಅನಿಯಮಿತ ಲೋಡ್ ಷೆಡ್ಡಿಂಗ್ ಅನಿವಾರ್ಯ... ಎಂದು ಬೆSCAM ಪ್ರಕಟಣೆ ತಿಳಿಸಿದೆ. ಜತೆಗೆ ನಾವು ನಡೀತಿರೊ ಈ ರಸ್ತೆ ಗುಂಡಿಮಯ. ಮಳೆ ಬೇರೆ ಶುರುವಾಯಿತು..''

''ಮತ್ತೆ ನೆನೀತೀವಲ್ಲ..?''

''ನೋಡಿ ಸರ್ ಐರನ್ ಮಳೆ ಇದ್ದರೂ ಕರೆಂಟ್ ಇಲ್ಲ. ಇಲ್ಲೇ ಹತ್ತಿರದಲ್ಲಿ ನನ್ನ ದೂರದ ಅಂಕಲ್ ಒಬ್ಬರು ಹೊಸಬಗೆಯ ಆಫೀಸು ತೆರೆದಿದ್ದಾರೆ. ಅಲ್ಲಿಗೆ ಹೋಗೋಣ. ಮಳೆ ನಿಲ್ಲೋವರೆಗೂ ಅಲ್ಲಿ ಇರಬಹುದು.''

''ಸರಿ ನಡಿ''

ಇಬ್ಬರೂ ದಾಪುಗಾಲು ಹಾಕಿದೆವು. ಆ ಹೊಸಬಗೆಯ ಆಫೀಸ್ ತಲುಪಿದೆವು.

★★★★★

''ಇದೇನಯ್ಯಾ... ಮುಂದೆ ಹಾಕಿರುವ ಬೋರ್ಡೇ ಇಷ್ಟು ವಿಚಿತ್ರವಾಗಿದೆ? 'ಅಂಕಲ್ SCAM ಕ್ಯಾಬಿನ್' ಕೆಳಗೆ... ಡಾ॥ ಚುಪೆ ಅಂತಿದೆ..''

''ಒಳಗ್ಬನ್ನಿ ಸರ್'' ಎಂದವನೆ ನಗುಮೊಗದ ಸ್ವಾಗತಕಾರಿಣಿಯ ಬಳಿಗೆ ಹೋಗಿ ನನ್ನನ್ನು ಪರಿಚಯಿಸಿಕೊಂಡು, ಅವಳಿತ್ತ ಚೀಟಿಯಲ್ಲಿ ನನ್ನ ಹೆಸರು ಬರೆದು ಒಳಗೆ ಕಳುಹಿಸಿದೆ. ಅಪ್ಪಣೆ ಪಡೆದು, ನಾನು ಮತ್ತು ಪ್ರೊ॥ ತೋಲಾಂಡರಾಯರು ಡಾ॥ ಚುಪೆ ಎಂಬ ನಾಮಫಲಕವಿದ್ದ ಒಂದು ದೊಡ್ಡ ಕ್ಯಾಬಿನ್ ಪ್ರವೇಶಿಸಿದಾಗ, '70'ರ ವಯಸ್ಸಿನ – ಆದರೆ ಕಾಂತಿಯುಕ್ತ ಚಹರೆಯುಳ್ಳ ವ್ಯಕ್ತಿಯೊಬ್ಬರು – ನಮ್ರ ಭಾವದಿಂದ ಎದ್ದು ಪ್ರೊ॥ ತೋಲಾಂಡರಾಯರತ್ತ ಕೈ ಮುಗಿದು, ನನ್ನತ್ತ 'ತಿರುಗಿ ಏನಯ್ಯಾ ಹೇಗಿದ್ದೀಯಾ? ಹೊಸ clientನ ಕರ್ಕೊಂಡ್ ಬಂದಿದ್ದೀಯಾ, ಆದ್ರೆ waiting list ಇದೆಯಲ್ಲಪ್ಪ' ಎಂದರು.

''ಛೇ ಛೇ casual ವಿಸಿಟ್ಟು ಅಂಕಲ್. ಇವ್ರು ಪ್ರೊ॥ ತೋಲಾಂಡರಾಯರು ಅಂತ ನನ್ನ ಗುರುಗಳು. ನಿಮ್ಮ ಆಫೀಸಿನ ಉದ್ಘಾಟನೆಗೆ ನಾನು ಬರಲಾಗಲಿಲ್ಲ'' ಎಂದೆ.

''ಎಲ್ಲಿ ಇವರ ಮನೆ'' ಡಾ॥ ಚುಪೆ ಕೇಳಿದಾಗ ಥಟ್ಟನೆ ನಾನು 'ಅಗ್ರಹಾರದಲ್ಲಿ' ಎಂದೆ.

''ಹ್ಲಾಂ! ಮತ್ತೆ ಇವರನ್ನು ಹ್ಯಾಗೆ ಹೊರಗೆ ಬಿಟ್ಟರು?''

''ಅಗ್ರಹಾರ ಅಂದರೆ ಆ ಅಗ್ರಹಾರ ಅಲ್ಲ, ರಾಜಾರಾಮ ಅಗ್ರಹಾರ ಸರ್'' ಎಂದು ವಿವರಣೆ ಕೊಟ್ಟೆ. ''ನಿಮ್ಮ ಕಛೇರಿಗೆ 'ಅಂಕಲ್ SCAM ಕ್ಯಾಬಿನ್' ಎಂದು ಹೆಸರಿಟ್ಟಿರುವ ಒಳಾರ್ಥವಾದರೂ ಏನು?'' ಎಂದು ಪ್ರಶ್ನಿಸಿದೆ.

ಡಾ॥ ಚುಪೆ ಹುಸಿನಕ್ಕರು.

''ನಾನು ರಿಟೈರ್ಡ್ ಸೈಕಾಲಜಿ ಪ್ರೊಫೆಸರ್. ಅಧ್ಯಾಪಕ ವೃತ್ತಿಯಲ್ಲಿ 30 ವರ್ಷಗಳ ಅನುಭವ. ನಿವೃತ್ತಿಯ ನಂತರ, ಮನೆಯಲ್ಲಿ ಕಾಲ ಕಳೆಯುವ ಕಲ್ಪನೆಯೆ ಬಲು ದುಸ್ತರವೆನಿಸಿತ್ತು. ಇಡೀ ದಿನ ಹೆಂಡತಿಯ ಮುಂದೆ, ಹೀಗೆ ಒಬ್ಬ ಒಂಟಿ ಗಂಡಸು ಸದಾ ಮನೆಯಲ್ಲಿರುವುದು ಯಾಕೋ ಅಪಾಯವೆಂದು ನನ್ನ ಸೈಕಾಲಜಿ ಮನಸ್ಸು ಎಚ್ಚರಿಕೆ ಕೊಡುತ್ತಲೇ ಇತ್ತು. ನನ್ನ ಅದೃಷ್ಟವೋ ಏನೊ ದೇಶದಲ್ಲಿ ತಿಳಿಯಾಗಿದ್ದ ರಾಜಕೀಯ ವಾತಾವರಣ, ಇದ್ದಕ್ಕಿದ್ದಂತೆ 'U'ಟರ್ನ್ ತೆಗೆದುಕೊಂಡಿತು. ಎಲ್ಲೆಲ್ಲೂ ಭ್ರಷ್ಟಾಚಾರ ತಾಂಡವಾಡತೊಡಗಿ ಒಂದರ ನಂತರ ಒಂದರಂತೆ SCAMಗಳು ನಾಯಿಕೊಡೆಗಳಂತೆ ತಲೆ ಎತ್ತಿ ನಿಂತವು. ಮಲಗಿದ್ದ ಲೋಕಾಯುಕ್ತ ಕಛೇರಿಗಳು ಜಾಗೃತಗೊಂಡವು. 'ಹಾರ'ದಿಂದ ಆರಂಭಗೊಂಡ ರಾಜಕಾರಣಿಗಳ ವಿಧಾನಸೌಧದ ಜೀವನ 'ಅಗ್ರಹಾರದ' ಬಾಗಿಲವರೆಗೆ ವಿಸ್ತರಣೆಗೊಂಡವು. ಈ ಘಟ್ಟದಲ್ಲೇ ನನಗೊಂದು ಯೋಜನೆ ಹೊಳೆದು ಈ ಕಛೇರಿಯ ಅಸ್ತಿತ್ವಕ್ಕೆ ನಾಂದಿಯಾದುದು....''

ಡಾ॥ ಚುಪೆ ಮುಂದುವರೆಸಿದರು....

''......ಇಷ್ಟು ದಿನ ವೈಭವದ ಜೀವನ ನಡೆಸಿ ಸದಾ ಜಾಮೂನು ತಿನ್ನುತ್ತಿದ್ದವರು ಈಗ ಜಾಮೀನಿಗಾಗಿ ವಕೀಲರ ಕಾಲನ್ನು ಹಿಡಿಯುವ ದೃಶ್ಯ ತೀರಾ ರೋಚಕವೆನಿಸಿತು ನನಗೆ. ಇಂಥವರು SCAMಗಳಲ್ಲಿ ಸಿಕ್ಕಿಕೊಳ್ಳುವ ಮೊದಲೇ ಕೌನ್ಸೆಲಿಂಗ್‌ಗೆ ಒಳಪಟ್ಟು ಕೆಲವು ವಿಚಾರಗಳನ್ನು ಮುಂಜಾಗೃತವಾಗಿ ತಿಳಿದಿರುವುದು ಅತ್ಯಂತ ಸೂಕ್ತ ಎನ್ನಿಸಿತು. ಈ ದಿಶೆಯಲ್ಲಿ ನಾನು ಆರಂಭಿಸಿರುವ ಕಛೇರಿ ರಾಜಕಾರಣಿಗಳಿಗೆ ವರದಾನವಾದೀತು ಹಾಗೂ ಅವರ ಮಾನಸಿಕ ಸಿದ್ಧತೆಗೆ ಈ ರೀತಿಯ ಟ್ರೈನಿಂಗ್ ಪೂರಕ'' ಅಂತನ್ನಿಸಿತು.

ಉದಾಹರಣೆಗೆ, ''ಜೈಲಿಗೂ ಬಯಲಿಗೂ ಇರುವ ಪ್ರಮುಖ ವ್ಯತ್ಯಾಸ, ಜೈಲ್ ಮ್ಯಾನ್ಯುಲ್ ಬಗ್ಗೆ ದೀರ್ಘ ಅಧ್ಯಯನ, ಅಲ್ಲಿನ ಆಹಾರ ಪದ್ಧತಿ, ಅಪರಾಧಗಳ ಗ್ರೇಡ್‌ಗೆ ಇರತಕ್ಕಂತಹ ಸೌಲಭ್ಯ, ಟಣಟಣಾ ಟಜಜಾಚಿ ಉಪಯೋಗಿಸಿ ರಾಜ್ಯ ಹಾಗೂ ದೇಶದಲ್ಲಿರುವ ಪ್ರಮುಖ ಜೈಲುಗಳ ಸೂಕ್ಷ್ಮ ಪರಿಚಯ, multi mediaಗಳ ಉಪಯೋಗದಿಂದ ರಾಜಕಾರಣಿಗಳಿಗೆ ಕಿಂಚಿತ್ತೂ ಭಯವಿಲ್ಲ, lie detector ಮಾಡಲು ಅಂಥವರಿಗೆ ಸಾಧ್ಯವೇ

ಇಲ್ಲ ಎಂಬ ಆಶ್ವಾಸನೆ ನೀಡುವುದು ಇತ್ಯಾದಿ... ಇತ್ಯಾದಿ.... ಈಗ ನಿಮ್ಮಿಬ್ಬರಿಗೂ ಆಶ್ಚರ್ಯವಾಗಬಹುದು. ನನ್ನ brain mappingನ ಸಂಖ್ಯೆ ಕರ್ನಾಟಕದಲ್ಲಿ 500ಕ್ಕೂ ಹೆಚ್ಚು ದಾಟಿದೆ. ಬೇರೆ ರಾಜ್ಯಗಳಿಂದ, ಅದರಲ್ಲೂ ನೆರೆಯ ತಮಿಳುನಾಡಿನಿಂದ, ತುಂಬಾ ಬೇಡಿಕೆ ಇದ್ದು, ಅವರನ್ನೆಲ್ಲಾ ಈಗ waiting listನಲ್ಲಿ ಸೇರಿಸಲಾಗಿದೆ. ಕೌನ್ಸೆಲಿಂಗ್ ನಡೆಸಲು ಈ ಜಾಗವೇ ಈಗ ನನಗೆ ಸಾಲುತ್ತಿಲ್ಲ. ಬದಲಿಗೆ ದೊಡ್ಡ ಜಾಗವೊಂದರ ಅನ್ವೇಷಣೆಯಲ್ಲಿ ನಾನಿದ್ದೇನೆ.''

ಡಾ|| ಚುಪೆಯವರ ವಿವರಣೆ ಮುಗಿಯುವುದಕ್ಕೂ ಅವರ ರಿಸೆಪ್ಷನಿಸ್ಟ್ ಒಳಬರುವುದಕ್ಕೂ ತಾಳೆಯಾಯಿತು.

''ಸರ್ ಖ್ಯಾತ ಚಿತ್ರನಟ 'ಶರ್ದನ್' ಮತ್ತು Wife Beaters' Association ಸೆಕ್ರೆಟರಿ ತಮ್ಮನ್ನು ಕಾಣಲು ಅರ್ಧ ಘಂಟೆಯಿಂದ ಹೊರಗೆ ಕಾಯುತ್ತಿದ್ದಾರೆ.''

''ಅವರನ್ನು ಒಳಗೆ ಕಳುಹಿಸು.''

ಸಂದರ್ಭ ತಿಳಿದು, ನಾನು ಮತ್ತು ಪ್ರೊ|| ತೋಲಾಂಡರಾಯರು ಕಛೇರಿಯಿಂದ ಹೊರ ಬಂದೆವು. ಮಳೆಯೂನಿಂತಿತ್ತು.

''ಪ್ರಪಂಚದಲ್ಲಿ ದೇವರಿಗೆ ಬೆಲೆ ಬರಬೇಕಾದರೆ ಪಾಪಿಗಳ ಅಸ್ತಿತ್ವ ಇರಲೇಬೇಕು'' ಯಾರೋ ಜ್ಞಾನಿಗಳ ನುಡಿ ಎಷ್ಟು ಸತ್ಯವೆನಿಸಿತು!

ಹಾಗೆಯೆ ಅಣ್ಣಾ ಹಜಾರೆಯವರ ಬೆಲೆಯೂ ಕೂಡ!

★★★★★

ಈ ಘಟನೆ ನಡೆದು ಒಂದು ವರ್ಷವಾದರೂ ಕಳೆದಿರಬೇಕು. ವಿದೇಶ ಪ್ರವಾಸದಿಂದ ಹಿಂದಿರುಗಿದ್ದ ಪ್ರೊ|| ತೋಲಾಂಡರಾಯರು ದಾರಿಯಲ್ಲಿ ಸಿಕ್ಕರು.

''ಹೇಗಿದ್ದಾನಯ್ಯಾ ನಿನ್ನ ಆ ಅಂಕಲ್ ಮತ್ತು ಅವನ ಕಛೇರಿ?''

''ಈಗ ಆ ಕಛೇರಿ ಮುಚ್ಚಿ ಹೋಗಿದೆ ಸರ್. ಬರುತ್ತಿದ್ದ ಪೆನ್ಷನ್‌ನಲ್ಲಿ ಸುಖಜೀವನ ನಡೆಸಿ, ಸಂತೋಷದಿಂದ ಇರಬಹುದಾಗಿದ್ದ ಮನುಷ್ಯ ಹಾಳು ಸಹವಾಸ ದೋಷದಿಂದ ವಿಪರೀತ ಹಣ ಮಾಡಿ, ಬಚ್ಚಿಡಲು ಸಾಧ್ಯವಾಗದೆ I.T. ರೈಡಾಗಿ, ಕೇಸು ದಾಖಲಿಸಿಕೊಂಡು, ವಿಪರೀತ ಸಂಕಟ ಅನುಭವಿಸುತ್ತಿದ್ದಾನೆ.''

''ಈಗ ಎಲ್ಲಿದ್ದಾನೆ ಆ ಮುಠ್ಠಾಳ?''

''ಪರಪ್ಪನ ಅಗ್ರಹಾರದ ಆರನೇ ನಂಬರ್ ಸೆಲ್‌ನಲ್ಲಿ, ಅದೇ ತನ್ನ ಹಳೇ clientಗಳ ಜತೆ!''

✵

# ಆನಂದ ವಿಹಾರ ಕ್ಲಬ್
# ದೆವ್ವಭೂತಗಳ ಸಂಗದಲ್ಲಿ

**- ಎಚ್.ಆರ್. ಹನುಮಂತ ರಾವ್**

**ಗು**ರುಗೋವಿಂದನಗರದ ರಾಮಮಂದಿರ ರಸ್ತೆಯನ್ನು ದಾಟಿ, ಸ್ವಲ್ಪ ದೂರ ಎಡಕ್ಕೆ ನಡೆದು, ಮತ್ತೆ ಬಲಕ್ಕೆ ತಿರುಗಿದರೆ ಕಾಣಸಿಗುವ ಏಕೈಕ ಬಹು ಮಹಡಿ ಕಟ್ಟಡವೇ ಆನಂದ ವಿಹಾರ ಕ್ಲಬ್ಬಿನ ಆಶ್ರಯಧಾಮ. ಶನಿವಾರದ ಸಂಜೆಯಾಗುತ್ತಲೇ ಅಲ್ಲಿಯ ಕುರ್ಚಿ, ಮೇಜುಗಳಿಗೆ ಎಲ್ಲಿಲ್ಲದ ಕಳೆ ಬರುತ್ತದೆ. ಬೇರರ್ ರಾಜೀವನ ಕಣ್ಣುಗಳು ಮಿಂಚುತ್ತವೆ. ಅವನು ಒದಗಿಸುವ ವಿವಿಧ ಪಾನೀಯಗಳು ದೇಹಕ್ಕೆ ಹೇಗೆ ತಂಪೊ, ಸಿದ್ಧಾಂತಿಗಳ ಮಾತೂ ಹಾಗೆಯೇ ಮನಸ್ಸಿಗೆ ಇಂಪು! ಮಧ್ಯೆ, ಮಧ್ಯೆ, ಸದಸ್ಯರ ಒಗ್ಗರಣೆಯ ಸಂಭಾಷಣೆ ಮತ್ತಷ್ಟು ಮನರಂಜನೆಯನ್ನು ಒದಗಿಸುತ್ತದೆ ಹುರಿಗಾಳಿನಂತೆ. ಸಿದ್ಧಾಂತಿಗಳು ಎಂದಿನಂತೆ, ಆ ಶನಿವಾರದ ಸಂಜೆಯೂ ಸಭೆ ಸೇರಿತ್ತು. ವೈಶಾಖದ ಹುಣ್ಣಿಮೆಯ ರಾತ್ರಿ. ಕಿಟಕಿಯಾಚೆಗಿನ ಬೆಳ್ಳಂಬೆಳದಿಂಗಳು ಅಲ್ಲಲ್ಲಿ ಹರಡಿ ಒಂದು ರೀತಿಯ ಆಹ್ಲಾದಕರ ವಾತಾವರಣ ಮೂಡಿಸಿತ್ತು. ಸ್ವಲ್ಪ ತಡವಾಗಿ ಬಂದ ಸಿದ್ಧಾಂತಿಗಳನ್ನು ನೋಡುತ್ತಲೆ ರಾಜೀವ, ಮೇಜಿನ ಮೇಲೆ ಅವರ ಇಷ್ಟಾರ್ಥಗಳನ್ನು ಮಿಂಚಿನ ವೇಗದಲ್ಲಿ ತಂದಿಟ್ಟ. ಸಣ್ಣದಾಗಿ ಕೆಮ್ಮುತ್ತಾ ಡಾ. ಚಿ. ಮೂ. (ಡಾಕ್ಟರ್ ಚಿದಂಬರ ಮೂರ್ತಿ) ಕೇಳಿಯೆಬಿಟ್ಟರು. ''ಮುಖ್ಯವಾದ ಗೃಹಕೃತ್ಯವಿರಬೇಕು ರಾಯರು ಲೇಟಾಗಿಲಿಕ್ಕೆ''. ಸಿದ್ಧಾಂತಿಗಳು ಗ್ಲಾಸನ್ನೆತ್ತಿ, ಗುಟುಕರಿಸುತ್ತಾ, ಎಲ್ಲರ ಕಡೆಯೂ ನೋಡಿ, ನಸುನಗುತ್ತಾ ಪ್ರಶ್ನೆಯೊಂದನ್ನು ಎಸೆದರು. ''ಅದು ಹಾಗಿರಲಿ, ನೀವುಗಳು ದೆವ್ವ, ಭೂತ ಮತ್ತು ಅವುಗಳ ಚೇಷ್ಟೆಯ ಬಗ್ಗೆ ಏನೆನ್ನುವಿರಿ? ಯಾರಿಗಾದರೂ ಅನುಭವವುಂಟೋ?''

''ನನ್ನ ಹೆಂಡತಿ ಚಿಕ್ಕಪ್ಪನ, ಷಡ್ಡಕನ ತಾತನವರನ್ನು ಮಾವಿನ ತೋಪಿನಲ್ಲಿ ದೆವ್ವವೊಂದು ರಾತ್ರಿ ಅಟ್ಟಿಸಿಕೊಂಡು ಬಂದಿತ್ತೆಂದು ಹೇಳುತ್ತಿದ್ದುದನ್ನು ಕೇಳಿದ್ದೇನೆ'' - ತಕ್ಷಣವೇ ಸಣ್ಣಗೆ ಉಲಿದರು ಎ.ಎನ್. ಕಪ್ಪಣ (ನಮ್ಮ ಆಡು ಭಾಷೆಯಲ್ಲಿ ಎಳೆ ನಿಂಬೆಕಾಯಿ). ರೇವಣ್ಣಪ್ಪ ಅಸಹನೆಯಿಂದ, ''ಅಲ್ರೀ, ಅವರು ಕೇಳಿದ್ದು ನಿಮಗೇನು ಗೊತ್ತು ಎಂದಷ್ಟೇ, ಯಾರ ತಾತನವರ ಬಗ್ಗೆಯೂ ಅಲ್ಲ?''

ರೇವಣ್ಣಪ್ಪ ಮಂಡಿಪೇಟೆ ಶೇಂಗ ದೊರೆ. ಅಲ್ಲದೆ ಷೇರುಪೇಟೆ ವ್ಯವಹಾರದಲ್ಲಿ ಎತ್ತಿದ ಕೈ. ವಿನಾಕಾರಣ ಹಣ, ಸಮಯ ಪೋಲಾಗುವುದನ್ನು ಸಹಿಸುವವರೇ ಅಲ್ಲ! ''ಅಷ್ಟಕ್ಕೂ, ಷಹರ್ಮೆ ಹುಟ್ಟೀ, ಬೆಳೆದೀ, ಈ ಕಪ್ಪಣ್ಣಾಗೆ ದೆವ್ವಗಳ ಬಗ್ಗೆ ಕ್ಯಾ ಮಾಲೂಮ್? ಬಿಡಿ! ಎಂದು ಸಣ್ಣಗೆ ಮೀಸೆಯಂಚಿನಲ್ಲೇ ನಗುತ್ತಾ, ಮೂದಲಿಸಿದರು ಗರಡಿ ಸಾಬು.

ಬದುಕಿರುವಾಗಲೇ ಭೂತ, ಪಿಶಾಚಿಗಳಂತೆ ಕಾಡಿಸುವ ಅತ್ತೆಯಂದಿರ ಬಗ್ಗೆ ನಾನು ಕರಾರುವಾಕ್ಕಾಗಿ ಹೇಳಬಲ್ಲೆ!'' ಎಂದು ಪಲುಕುತ್ತ ಅತ್ತಿತ್ತ ನೋಡಿದರು ಪಿಲ್ಟು,

''ಇದೀಗ, ನಮ್ಮ ಲಕ್ಷ್ಮಣಪ್ಪನವರಿಗೆ ಅತ್ತೆಯ ಕಾಟ ಇದೆ ಎಂತ ಒಪ್ಪಿಕೊಂಡ ಹಾಗಾಯಿತು ಪಾಪ! ಯಾರಾದರೂ ಮಾಂತ್ರಿಕರನ್ನು ಕರೆಸಿ ನೋಡಿ!'' ಎಂದು ನಗೆಯಾಡಿ, ಎಲ್ಲರನ್ನೂ ನಗೆಯಲ್ಲಿ ತೇಲಿಸಿದರು ಭೀಮಣ್ಣ. ''ವಿಧಾನಸೌಧ ಸುತ್ತಲೂ ಮಾಟಮಾಡಿ ಏನೆಲ್ಲಾ ಹಾಕಿದ್ದರೇಂತ ಪೇಪರು, ಟೀವಿಗಳಲ್ಲಿ ಫೋಟೋ ಸಮೇತ ಸುದ್ದಿ ಪ್ರಚಾರ ಆಗಿದೆಯಲ್ಲ? ನಮ್ ಪರ್ಮೇಶಿ ಹೇಳ್ದಂಗ ಯಾರಾದರೂ ಎಮ್ಮೆಲೆಗಳನ್ನ ಕೇಳಿ ನೋಡ್ರಲ್ಲಾ?!'' ಎಂದು ಒಗ್ಗರಣೆಯನ್ನು ಸೇರಿಸಿದರು ಭೀಮಣ್ಣ. ಮಾತು ಎಲ್ಲೆಲ್ಲೋ ಹೊರಳುತ್ತಿದ್ದುದನ್ನ ಕಂಡ ಸಿದ್ಧಾಂತಿಗಳು ಮತ್ತೊಂದು ಗುಟುಕು ಹೀರಿ, ನವಿರಾಗಿ ಕೆಮ್ಮುತ್ತಾ, ''ಈ ದಿನ ತಡವೇಕೆಂದು ಕೇಳಿದಿರಲ್ಲವೆ ಡಾಕ್ಟ್ರೇ? ನೀವುಗಳೆಲ್ಲಾ ಏನು ಹೇಳುತ್ತೀರೊ ಈ ಅನುಭವ ಕೇಳಿದ್ದೇ ಆದರೆ'' ಎಂದು, ಎಲ್ಲರ ಕಡೆಯೂ ದೃಷ್ಟಿ ಹಾಯಿಸಿದರು ದೇಶಾವರಿ ನಗೆ ಬೀರಿ.

ಆ ಕೂಡಲೇ ಎಲ್ಲೆಲ್ಲೂ ನಿಶ್ಯಬ್ದ.... ನೀರಸ ಮೌನ. ಸಿದ್ಧಾಂತಿಗಳ ಮಾತು. ಎಲ್ಲರಿಗೂ ಪ್ರಚಂಡ ಕುತೂಹಲ, ಆಸಕ್ತಿ. ಸಿದ್ಧಾಂತಿಗಳು ಮುಂದುವರಿಸಿದರು, ''ಹಾಸನ ಸಕಲೇಶಪುರ ಮಾರ್ಗದಲ್ಲಿ 17ನೇ ಮೈಲಿ ಕಲ್ಲು ದಾಟುತ್ತಲೇ ಎಡ ಬದಿಗೆ ಒಂದು ಕೂಡು ರಸ್ತೆ ಇದೆ. ಆ ಮಾರ್ಗದಲ್ಲಿ ಒಂದು ಮೈಲಿಯಷ್ಟು ಸವಿಸಿದರೆ ನಿಮಗೆ ನಮ್ಮ ಬಿದರಿ ಮಾವನ ಗ್ರಾಮ ಓಬಲೇಶಪುರ ಸಿಗುತ್ತದೆ. ಅಲ್ಲಿ ಪೂರ್ವೀಕರಿಂದ ಬಂದ ಎಸ್ಟೇಟೊಂದರ ಒಡೆಯರಾದ ಈ ಮಾವ, ಪರಂಧಾಮಯ್ಯನವರ ವಾಸ''. ಓ, ಅವರೇ ಸಾರ್? ಹೆಂಡತೀನ ಮನೇಲೆ ಬಿಟ್ಟು, ಮೈಲಾರೇಶ್ವರ ಜಾತ್ರೇಲಿ, ಕುಡಿದ ಮತ್ತಿನಲ್ಲಿ ಹೆಂಡತಿ ತಪ್ಪಿಸ್ಕೊಂಡಿದ್ದಾಳಂತ ಪೋಲಿಸರಿಗೆ ದೂರು ಕೊಟ್ಟಿದ್ರಲ್ಲಾ''? ಎಂದರು ಭೀಮಣ್ಣ. ''ಅಲ್ಲ, ಅವನು ಬೇರೆ, ಆತ ಪರಂದಾಮಯ್ಯ'' ಎಂದರು ಸಿದ್ಧಾಂತಿಗಳು. ಎಲ್ಲರ ಮುಖದಲ್ಲೂ ಪ್ರಶ್ನಾರ್ಥಕ ಚಿನ್ಹೆ.

''ನಮ್ಮ ಮಾವ ಪರಂಧಾಮಯ್ಯ, .....ಈತ ಪರಂದಾಮಯ್ಯ. ನನ್ನ ದೂರದ ಬಂಧು ಹಾಗು ಆಪ್ತ ಮಿತ್ರರಾದ ಜಾನಕೀರಾಮಪ್ಪನವರು ಭಾವ ಮೈದುನ ಎಂದು ಸ್ಪಷ್ಟೀಕರಿಸಿದರು. –''ಮೈಲಾರೇಶ್ವರ ಜಾತ್ರೆ ಪರಂದಾಮ ಪ್ರಸಂಗ''ದಲ್ಲಿ ಈ ವೃತ್ತಾಂತವನ್ನು ವಾಚಕರು (ಅಥವಾ, ಬಿ. ವೆಂಕಟಾಚಾರ್ಯರ 'ನಮ್ಮ ಪ್ರಿಯ ಪಾಠಕ ಮಹಾಶಯ'!) ಓದಿರಬಹುದು–

ಅವರ ಮೂರನೇ ಮಗಳ ಮದುವೆ ನಿಶ್ಚಿತಾರ್ಥ ಈ ಬೆಳಿಗ್ಗೆ. ಆ ಕಾರಣ ನಿನ್ನೆ ನಾನು ಅಲ್ಲಿಗೆ ಹೊರಟು, ಕೂಡು ರಸ್ತೆ ಸೇರುವ ಮುಂಚೆ – ಸುಮಾರು ಮೂರು, ನಾಲ್ಕು ಮೈಲಿಗಳಿರಬಹುದು – ಕಾರು ಕೆಟ್ಟು ನಿಂತಿತು. ಏನು ಕಸರತ್ತು ಮಾಡಿದರೂ ಹರತಾಳ ಶುರು ಮಾಡಿತ್ತು. ಸುಸ್ತಾದೆ.

''ಅದೇ – 'ಹುಂಡೈ ವೆರ್ನ' ಸಾರ್'' – ಪಿಲ್ಲು ಅತಿಮೆಲು ಧ್ವನಿಯಲ್ಲಿ ಕೊಶ್ಚನಿಸಿದರು. ಅವರಿಗೆ ದೇಶೀ ಕಾರುಗಳೆಂದರೆ ಅಷ್ಟಕ್ಕಷ್ಟೆ. ವಿದೇಶಕ್ಕೆ ಹೋಗಿ ಬಂದವರು. ''ಅಲ್ಲ, ಅದು ನನ್ನ ಹಿರೇಮಗನದು, ಮಾರುತಿ ಸೆಡಾನ್ ನನ್ನ ಉಪಯೋಗಕ್ಕೆ'' – ಶಂಕರ ಸಿದ್ಧಾಂತಿಗಳು ಮುಂದುವರೆಸಿದರು – 'ಆಗಲೇ ರಾತ್ರಿ ಎಂಟು ಗಂಟೆ ಸಮಯ. ಆಗಾಗ್ಗೆ ಸರಕು ಲಾರಿಗಳು,

ಅಪರೂಪಕ್ಕೆಂಬಂತೆ ಬಸ್ಸು, ಕಾರು, ಹಾಗು ಬೈಕುಗಳನ್ನು ಬಿಟ್ಟರೆ ಬಿಕೊ ಎನ್ನುವ ಹೆದ್ದಾರಿ, ತುಂಬು ಕತ್ತಲೆ, ಹುಣ್ಣಿಮೆಯ ಚಂದ್ರ ಮೋಡಗಳು ಹಿಂದೆ ತಲೆ ಮರೆಸಿಕೊಂಡಿದ್ದ. ಸಾಲದ್ದಕ್ಕೆ ಸಣ್ಣದಾಗಿ ಮಳೆಯು ಹನಿ ಬೀಳಲು ಪ್ರಾರಂಭ. ಇದೀಗ ನನ್ನ ಕಾರನ್ನು ಬಿಟ್ಟು ಎಲ್ಲೂ ಹೋಗಲಾರೆ, ಅಲ್ಲಿಯೇ ಇರಲಾರೆ – ಎಂಬ ಇಕ್ಕಟ್ಟಿಗೆ ಬಿದ್ದೆ. ''To leave or not to leave?" ಎಂದು ಹ್ಯಾಮ್ಲೆಟ್‌ಗೇ ಮೌನವಾಗಿ ಸವಾಲೆಸೆದೆ. 'ಕಾರಿದ್ದವರಿಗೆ ಆಗಾಗ್ಗೆ ಹಿಡಿಯುವ ಭೂತ ಎಂದರೆ ಇದೇ' ಎಂದು ನಗೆಯಾಡಿಕೊಂಡೆ! ಕಾರಂತೂ 'ಅಯ್ಯೋ' ಅನ್ನಲಿಲ್ಲ, ಸೊಪ್ಪೂ ಹಾಕಲಿಲ್ಲ! ಕಾರಿಂದ ಇಳಿದು, ಹೆದ್ದಾರಿಯಲ್ಲಿ ಬರುವ ವಾಹನಗಳಿಗೆ ಕೈ ತೋರಿಸುತ್ತಾ ಅಡ್ಡ ಹಾಕಿ ಪ್ರಯತ್ನ ಪಟ್ಟೆ ಸಹಾಯಕ್ಕಾಗಿ. ಯಾರೂ ನಿಲ್ಲಿಸಿ, ವಿಚಾರಿಸುವ ಔದಾರ್ಯ ತೋರಲಿಲ್ಲ. ಕಾಡಿನಿಂದ ಹುಲಿ, ಚಿರತೆಗಳೇನಾದರು ಬಂದರೆ? ಮಳೆಯ ಮಧ್ಯೆಯೂ, ಆ ರಾತ್ರಿ ಮೈಯೆಲ್ಲಾ ಬೆವರಿದೆ! 'ಆಪತ್ತಿಗೆ ಆದವನೇ ನೆಂಟ' ಎಂಬ ಗಾದೆಗೆ ಅರ್ಥವೇ ಇಲ್ಲ ಎಂದು ತರ್ಕಿಸಿದೆ.

ಅಷ್ಟು ಹೊತ್ತು ಮಾತಾಡಿದ್ದಕ್ಕೆ, ಮತ್ತೊಂದು ಸಾರಿ ಗ್ಲಾಸನ್ನು ತುಟಿಗೆ ತಂದರು. ಖಾಲಿಯಾದ ಗ್ಲಾಸನ್ನು ಮಿಂಚಿನಂತೆ ರಾಜೀವ ತೆಗೆದು ಮತ್ತೆ ತುಂಬಿಸಿಟ್ಟ. ಕ್ಲಬ್ಬಿನ ಅಂಗಳದಲ್ಲಿ ಮೌನವೋ ಮೌನ, 'ಪಿನ್ ಡ್ರಾಪ್ ಸೈಲೆನ್ಸ್' ಎಂದು ಅಂಗ್ರೇಜಿಯಲ್ಲಿ ಹೇಳುವಂತೆ. ''ಮತ್ತೆ ಅದು ಹೇಗೆ ಎಲ್ಲ ಮುಗಿಸಿ ವಾಪಸ್ಸುಬಂದ್ರಿ?'' – ಎಂದರು ಎ.ಎನ್.ಕೆ. – ಮೌನವನ್ನು ಭೇದಿಸುತ್ತಾ – ತಡೆಯಲಾರದ ಕುತೂಹಲ ಅವರಿಗೆ.

''ನೋಡಿ, ಹೇಳೋದೇ ಮರೆತಿದ್ದೆ, ಹೊರಡುವಾಗ ಮೊಬೈಲ್ ಫೋನನ್ನೂ ಮನೇಲಿ ಬಿಟ್ಟು ಬಂದಿದ್ದೆ. ಅದು ಇದ್ದಿದ್ದರೆ, ಮಾವನಿಗೆ ತಿಳಿಸಿ ಇಕ್ಕಟ್ಟಿನಿಂದ ಪಾರಾಗಬಹುದಿತ್ತು.''

When troubles come, they come not in singles but in battalions" ಅಂತ ಬೈಬಲ್‌ನಲ್ಲಿ ಹೇಳಿದ್ದು ಜ್ಞಾಪಕಕ್ಕೆ ಬರುತ್ತೆ, ಅಲ್ವಾ ಸಾರ್? ಎಂದರು ಎಳೆನಿಂಬೆ ತೊದಲುತ್ತಾ. ಮೂರು ರೌಂಡ್ ಮುಗಿಸಿದ್ದರ ಪರಿಣಾಮ ಅವರಿಂದ ಶೇಕ್ಸ್‌ಪಿಯರ್‌ನ ಕೊಲ್ಲಿಸಿತ್ತು.

''ಬೈಬಲ್ ಅಲ್ಲಾರೀ, 'ಶೆಲ್ಲೀ' ನೋ 'ಡ್ರೈಡನ್ನೊ' ಹಾಂಗತ ಹೇಳಿರೋದು ಗೊತ್ತಾ'' ಎಂದು ಚಂದ್ರು ತಮ್ಮ ಸಾಹಿತ್ಯ (ಅ) ಜ್ಞಾನವನ್ನು ಪ್ರದರ್ಶಿಸಿದರು. ಹೆಚ್ಚು ಕಮ್ಮಿ ಇಬ್ಬರ ಸ್ಥಿತಿಯೂ ಒಂದೇ ಆಗಿತ್ತು!

ಸಿದ್ಧಾಂತಿಗಳು ಮುಂದುವರಿಸಿದರು. ''ಹಲವಾರು ನಿಮಿಷಗಳ ತರುವಾಯ, ಹಲವಾರು ಗಂಟೆಗಳೆಂದೇ ಅನಿಸಿತ್ತು ನನಗೆ ಆಗ – ರಸ್ತೆಯಲ್ಲಿ ಎದುರು ಬದಿಯಿಂದ ಸಣ್ಣಗೆ ಮಿನುಗುವ ಬೆಳಕಿನ ಜೊತೆ ವ್ಯಕ್ತಿಯೊಬ್ಬ ನನ್ನ ಬಳಿಗೇ ಬಂದ. ಸುಮಾರು ವಯಸ್ಸಿನ ಈ ವ್ಯಕ್ತಿ 'ಯಾಕೆ ಇಲ್ಲಿದ್ದೀರಿ ಸ್ವಾಮಿ?' ಯಾರಿಗಾದರೂ ಎದುರು ನೋಡುತ್ತಿರುವಿರಾ? ಎಂದ. ಮಂದವಾದ ಬೆಳಕಲ್ಲಿ ಆತನ ಚಹರೆ, ಕೈ, ಕಾಲುಗಳೂ ಕಾಣುವಂತಿರಲಿಲ್ಲ. ಜೀನ್ಸ್‌ಪ್ಯಾಂಟನ್ನು ಧರಿಸಿದಂತೆ ಭಾಸವಾಯಿತಷ್ಟೇ. ಹತ್ತಿರದ ಹಳ್ಳಿಗನಿರಬೇಕು. ನನ್ನ ಕಾರು ಕೆಟ್ಟು ನಿಂತಿದೆ, ಫೋನು ಮಾಡೋಣವೆಂದರೆ, ಮರೆತು ಬಂದಿದ್ದೇನೆ. ಕಾರಲ್ಲಿ ಹಾದು ಹೋಗುವವರನ್ನ

ನಿಲ್ಲಿಸಿ ಪ್ರಯತ್ನ ಮಾಡಬೇಕಾಗಿದೆ. ಈ ಹೊತ್ತಿನಲ್ಲಿ ಯಾವ ಗ್ಯಾರೇಜು ತೆರುದಿರುವುದಿಲ್ಲವಲ್ಲ'' ಎಂದೆ. ನಾನು ಎಲ್ಲಿಂದ ಬಂದೆ, ಎಲ್ಲಿಗೆ ಹೋಗುವವನೆಂಬುದನ್ನು ಕೇಳಿ ತಿಳಿದುಕೊಂಡು 'ಸ್ವಾಮಿ, ಈಗ ಜಾಗ ಒಳ್ಳೆಯದೂ ಅಲ್ಲ, ನಿಮ್ಮ ಮಾತು, ನಿಮ್ಮನ್ನು ನೋಡಿದ ಮೇಲೆ ಎಲ್ಲೋ ಮುಂಚೆ ನೋಡಿರಬೇಕಂತ ಅನಿಸುತ್ತದೆ, ಇರಲಿ ಬಿಡಿ, ಇಲ್ಲೊಬ್ಬ – ಅವನ ಹೆಸರು ಇಮ್ತಿಯಾಜ್ ಅಹ್ಮದ್ ಅಂತ – ಕೆಲವು ಸಮಯದ ಹಿಂದೆ ಈ ದಾರಿಯಲ್ಲಿ ಒಂದೆರಡು ಮೈಲಿ ದೂರದಲ್ಲಿ ಗ್ಯಾರೇಜನ್ನು ಇಟ್ಟಿದ್ದ ನೆನಪು. ಮನೆಯೂ ಪಕ್ಕದಲ್ಲೇ ಇತ್ತು. ಹೇಗಿದ್ದರೂ ಅದೇ ದಾರಿಯಲ್ಲಿ ಹೋಗುತ್ತಿದ್ದೇನೆ. ನಿಮ್ಮನ್ನು ನೋಡುವಂತೆ ಹೇಳುತ್ತೇನೆ. ಕಷ್ಟಕ್ಕಾಗುವವ'.

ನಾ ಏನೂ ಹೇಳಲಿಲ್ಲ. ನನ್ನ ಅನುಮಾನವನ್ನು ಗುರ್ತಿಸಿದ ಅವನು 'ಆತ ಖಂಡಿತ ಸಿಗೇ ಸಿಗುತ್ತಾನೆ. ಧೈರ್ಯವಾಗಿರಿ' ಎಂದು ಹೇಳಿ ನಿಲ್ಲದೆ ಮುಂದೆ ಹೋಗಿಯೇಬಿಟ್ಟ, ನನ್ನ ವಿಧಿ ಹಳಿದುಕೊಂಡು ಮತ್ತೆ ಕಾರುಗಳಿಗೆ ಅಡ್ಡಹಾಕುವ ಕಾರ್ಯ ಮುಂದುವರೆಸಿದೆ. ಮಾತು ನಿಲ್ಲಿಸಿ, ಕರವಸ್ತ್ರದಿಂದ ಮುಖವನ್ನು ಹಾಗು ಮೇಜಿನ ಮೇಲಿದ್ದ ಕನ್ನಡಕವನ್ನು ಒರೆಸಿಕೊಂಡರು. – ''ಆಮೇಲೆ ಸಾರ್''? – ಎಲ್ಲರ ಕೌತುಕ ತಾರಕಕ್ಕೇರಿತ್ತು!

ಅವನು ಹೋದ ಕೆಲವೇ ನಿಮಿಷಗಳಾಗಿರಬೇಕು. ಯಾರೋ ನನ್ನ ಹಿಂದಿನಿಂದ 'ಶಂಕ್ರೂ ದೋಸ್ತ್' ಎಂದು ಕೂಗಿದಂತೆ ಭಾಸವಾಯಿತು, ಕ್ಷಣ ಕಾಲ ಉಸಿರೇ ನಿಂತು ಹೋದಂತಾಗಿ, ಭಯದಿಂದ ಹಿಂತಿರುಗಿದೆ. 'ಯಾರದು?' ಎಂದು ಕೂಗಿಕೊಂಡೆ. ಬಿಳಿಯ ವಸ್ತ್ರಧಾರಿಯಂತೆ ಕಂಡ. ಗಹಗಹಿಸಿ ನಕ್ಕ ನಾನ್ಯಾರು ಗೊತ್ತಿಲ್ಲವಾ? ಸರಿಯಾಗಿ ನೋಡು ಎನ್ನುತ್ತಾ ಮುಖವನ್ನು ಹತ್ತಿರ ತಂದ. ಮಂದ ಬೆಳಕಲ್ಲೂ ಅವನನ್ನು ನನ್ನ ಬಾಲ್ಯ ಸ್ನೇಹಿತ 'ಇಮ್ತಿಯಾಜ್' ಎಂದು ಗುರುತು ಹಿಡಿದೆ. ಅರವತ್ತರ ಆಜೂ ಬಾಜೂ ವಯಸ್ಸಿನವನಂತೆ ಕಂಡ. ನಾನು ಕಾಲೇಜು ಮೆಟ್ಟಿಲು ಹತ್ತಲು ದೂರದ ಸ್ಥಳಕ್ಕೆ ಹೋಗುವ ತನಕ ಯಾವಾಗಲೂ ಒಟ್ಟೊಟ್ಟಿಗೆ ಇರುತ್ತಿದ್ದವರು. ನಂತರ ಸಂಪರ್ಕವೇ ಇರಲಿಲ್ಲ. ಮತ್ತೆ ಸರಾಗವಾಗಿ ಉಸಿರಾಡುವಂತಾಯಿತು. ಸಂತೋಷದಿಂದ ಅವನ ಕೈ ಕುಲುಕಲು ಹೋದೆ. ದೂರ ಸರಿದ. ನಾನು ಮತ್ತಷ್ಟು ಹತ್ತಿರ ಹೋದೆ. ಆಶ್ಚರ್ಯ! ಅವನು ಇನ್ನಷ್ಟು ದೂರ ಹೋದ. ಮೊದಲಿಗೆ ಹುಡುಗತನ ಅವನಲ್ಲಿ ಕಾಣಲಿಲ್ಲ. ಬಿಳಿಯ ಗಡ್ಡ ಬಿಟ್ಟಿದ್ದ. ಎಣ್ಣೆ ಕಾಣದ, ಬಾಚದ, ತಲೆಕೂದಲು. ಕಣ್ಣುಗಳು ತೀವ್ರವಾಗಿ ಹೊಳೆಯುತ್ತಿದ್ದವು. ಅವನು ನಗುತ್ತಿದ್ದರೂ, ಮುಖದಲ್ಲಿ ಯಾವುದೋ ವಿಷಾದದ ಛಾಯೆ ಆವರಿಸಿತ್ತು. ನನಗೆ 'ಏನಿಲ್ಲಿ?' ಎಂದ. ಹೇಳಿದೆ, ನನ್ನ ಉದ್ದೇಶ ಹಾಗು ಕೆಟ್ಟು ನಿಂತಿದ್ದ ಕಾರನ್ನು ತೋರಿಸಿದೆ. 'ಅದು ಹಾಗಿರಲಿ, ನೀ ಇಲ್ಲಿ?' ಎಂದು ಕೇಳಿದೆ. 'ಮೊದಲು ನಿನ್ನ ಕಾರಿಗೇನಾಗಿದೆಯೋ ನೋಡೋಣ 'ಬಾ' ಎಂದು ಹೇಳಿ ಕಾರಿನ ಸುತ್ತಾ ಹೋಗಿ ಬಂದ. ನಾನು ನಿನಗೇನು ಗೊತ್ತು ರೀಪೇರಿ ಬಗ್ಗೆ' ಎಂದೆ. ಅವನು ಉತ್ತರಿಸುವ ಬದಲು 'ಕಾರಿನ ಬೀಗದ ಕೈ ಎಲ್ಲಿದೆ?' ಎಂದ. 'ಕಾರಿನ ಸ್ಟೀರಿಂಗೇ ಇದೆ', 'ಸರಿ, ಉಧರ್ ಭೀ ಛೋಡೋ, ನಿನ್ನ ಊರಿಗೆ ಬಿಟ್ಟು ವಾಪಸ್ ಬಂದು ಆ ಕಾರನ್ನ ರಿಪೇರಿ

ಮಾಡ್ಸಿ, ಬೆಳಿಗ್ಗೆ ನಿಮ್ಮ ಮಾವನ ಮನೆ ಮುಂದೆ ಬಿಟ್ಟು ಹೋಗ್ತೀನಿ. ಕಾರಿನ ಯೋಚ್ನೆ ಬಿಡು. ಈಗ ನಡಿ ನನ್ನ ಕಾರಿನಲ್ಲಿ' ಎಂದು ಹೇಳುತ್ತಾ ನನ್ನ ಉತ್ತರಕ್ಕೂ ಕಾಯದೆ ಮುಂದೆ ಹೋಗಿ ದೂರದಲ್ಲಿ ಎಲ್ಲೋ ನಿಂತಿದ್ದ ಹಳೇ 'ಫಿಯಟ್' ಕಾರನ್ನು ತಂದು ನಿಲ್ಲಿಸಿದ. ಕಾರಿನ ಬಾಗಿಲು ತೆರೆದು ಬೇಡವೆಂದರೂ ನನ್ನ ಹತ್ತಿಸಿಕೊಂಡ. 'ಅಲ್ಲಾ, ನೀನಿರೋದು ಎಲ್ಲಿ? ಇಲ್ಲಿ ಹೇಗೆ ಬಂದೆ? ಕಾರಿನ ರಿಪೇರಿ ನಿನ್ಗೇನು ಗೊತ್ತು? ನಿನ್ನಕಥೆ ಏನು? ಎಂದೆಲ್ಲ ಕೇಳಿದೆ, 'ನೋಡು ಬ್ರದರ್, ಸುಮಾರು ನಲ್ವತ್ತು ವರ್ಷಗಳು ಆಗಿರಬೇಕು ನಾವು ಒಬ್ಬರೊನ್ನೊಬ್ಬರು ನೋಡಿ. ಅಲ್ಲವಾ?' ಎಂದು ಕೇಳಿದ ಕಾರನ್ನು ಓಡಿಸುತ್ತಾ. 'ಅಲ್ಲವೆ ಮತ್ತೆ? ನೀನು, ನಾನು ಯಾವಾಗಲೂ ಒಟ್ಟಿಗೇ ಇರುತ್ತಿದ್ದೆವೆಲ್ಲಾ ಆಗೆಲ್ಲಾ? ಆ ಬಚಪನ್ಕೇದಿನ್ ಹೇಗಾದರೂ ಮರೆಯಲಿಕ್ಕೆ ಆಗುತ್ತೆ?', 'ನೀನು ಶಹರ್‌ಗೆ ಹೋದಮೇಲೆ, ಇಲ್ಲಿ ನಮ್ಮಪ್ಪಗೆ ಜಾಸ್ತಿ ಓದ್ಸಿಲಿಕ್ಕೆ ಆಗಲಿಲ್ಲ. ದುಬೈಗೆ ಕಳಿಸಿಬಿಟ್ಟ. ಮಾಬಾಪ್ ಇಬ್ಬರೂ ಹೋದಮೇಲೆ ಮತ್ತೆ ಇಲ್ಲಿಗೆ ಬಂದು, ಈ ಹೈವೇನಲ್ಲಿ ಗ್ಯಾರೇಜ್ ಇಟ್ಟಿದ್ದ 'ಸ್ಟೀಫನ್' ಅನ್ನೋವ್ನ ಹತ್ತಿರ ಕೆಲ್ಸಕ್ಕೆ ಸೇರಿದೆ. ಅವ್ನ ಹತ್ತಿರ ದುಡಿದೂ ದುಡಿದೂ, ಮದುವೆನೂ ಮಕ್ಕಳೂ ಆಗಿ, ಹೀಗೆ ವಯಸ್ಸಾಗ್ಸೋಯ್ತು. ನಾನು, ನೀನು ಇದ್ದ ಊರ್ಗೂ ಈ ಗ್ಯಾರೇಜ್ಗೂ ಬಹ್ಳ ದೂರಾನೆ, ಅಲ್ವಾ ಗುರು? ಅದ್ಕೆ, ನಾನು ವಾರಕ್ಕೊಂದ್ಸಲ, ಹಬ್ಬಕ್ಕೆ ಹೋಗಿಬರ್ತಾ ಇದ್ದೆ, ನಮ್ಮಪ್ಪ ಅಮ್ಮ ಹೋದ್ಮೈದ್ ವರ್ಷಕ್ಕೆ, ನನ್ನ ಹೆಂಡ್ತೀಗೆ ಹಾವು ಕಚ್ಚಿ ಇಬ್ಬರು ಮಕ್ಕಳ್ನ ಬಿಟ್ಟು, ಅವಳೂ ಹೋಗ್ಬಿಟ್ಳು ಬ್ರದರ್. ಆ ವೇಳೆಗಾಗಲೇ, ನಾನು ಸ್ವಲ್ಪ ದುಡ್ಡು ಮಾಡ್ಕೊಂಡಿದ್ದೆ. ಸ್ಟೀಫನ್ ನನಗೇ ಗ್ಯಾರೇಜ್ ಮಾರ್ಬಿಟ್ಟು ಬೇರೆಲ್ಲೋ ಹೋಗ್ಬಿಟ್ಟ. ಪಕ್ಕದಲ್ಲೇ ಮನೆ ಮಾಡಿ, ಮಕ್ಕಳ್ನ ನೋಡ್ಕೊಳ್ತಾ ಇದ್ದೆ ಗುರು. ಅದಿರಲಿ, ನಿನ್ನ ಕಥೆ ಏನು? ದೇವರು ಚೆನ್ನಾಗಿಟ್ಟಿದ್ದಾನೆ ಅಂತ ನಿನ್ನ ಕಾರು, ಡ್ರೆಸ್ಸು ಎಲ್ಲ ನೋಡಿದರೆ ಅನ್ಸುತ್ತೆ. ಅಲ್ವಾ? ಇದೇನಾ ನಿಮ್ಮಾವ್ನ ಮನೆ?'

'ಆ ವೇಳೆಗೆ, ಎಸ್ಟೇಟ್ ಮನೆಯ ಹತ್ತಿರ ಬಂದಿದ್ದು, ಕಾರನ್ನು ನಿಲ್ಲಿಸಿದ. ನಾನು ಕೆಳಗೆ ಇಳಿಯುತ್ತಾ, ನನ್ನ ಜೊತೆ ಮನೆಯೊಳಗೆ ಬರಹೇಳಿದೆ. 'ಸಾರಿ ಬ್ರದರ್, ಈಗಾಗಲೇ ಬಹಳ ಹೊತ್ತಾಗಿದೆ. ನಿನ್ನ ಕಾರು ಬೆಳಿಗ್ಗೆ ಮನೆಮುಂದೆ ರಿಪೇರಿಯಾಗಿ ಬಂದಿರುತ್ತದೆ. ನಾನು ಇನ್ನೂ ಯಾರಿಗೋ ಈಗಲೇ ಬರುತ್ತೇನೆಂದು ಹೇಳಿ ಬಂದಿದ್ದೇನೆ. 'ಬೈ', ಹೇಳುತ್ತಾ ಕಾರನ್ನು ಓಡಿಸಿಕೊಂಡು ಹೋಗಿಯೇಬಿಟ್ಟ. ಮಾರನೇ ದಿನ ಬೆಳಿಗ್ಗೆ, ನಿಶ್ಚಿತಾರ್ಥ ಕಾರ್ಯದಲ್ಲಿ ಎಲ್ಲರೂ ಮಗ್ನರಾಗಿದ್ದು, ಕಾರಿನ ವಿಷಯ ಯಾರ ಗಮನಕ್ಕೂ ಹೆಚ್ಚು ಬರಲಿಲ್ಲ. ನನಗೆ ಮಾತ್ರ, ಒಳಗೊಳಗೇ ಭಯ ಕಾತರವಿತ್ತು. ಆದರೆ ಗಳಸ್ಯ, ಕಂಠಸ್ಯ ಮಿತ್ರನ ಬಗ್ಗೆ ಅನುಮಾನ ಯಾತರದು? ಬೀಗರನ್ನೆಲ್ಲಾ ಕಳುಹಿಸಿಕೊಟ್ಟ ನಂತರ, ನಮಗೊಂದು ಸುದ್ದಿ ಬಂತು, ನನ್ನ ಮಾರುತೀ ಕಾರು ಎಸ್ಟೇಟ್‌ನ ಆಚೆ ಬದಿ, ಮುಳ್ಳುಪೊದೆಯ ಹತ್ತಿರ ನಿಲ್ಸಿರೋದನ್ನ ಕಂಡು ವಿಷಯ ರವಾನಿಸಿದ್ದರು. ನಾವು ಹಲವರು ಹೋಗಿ ನೋಡಿದಾಗ, ನನ್ನದೇ ಆಗಿತ್ತು ಆ ಕಾರು. ಬೀಗದ ಕೈ ಕೂಡ ಅದರಲ್ಲೇ ಇದ್ದು, ಅಲ್ಲಿ ಯಾರು ಕಾಣಿಸಲಿಲ್ಲ. ಓಡಿಸಿ ನೋಡಿದೆ, ಪೆಟ್ರೋಲ್ ಸಾಕಷ್ಟು ಇತ್ತು. ಇಮ್ತಿಯಾಜ್ ಇಲ್ಲಿ ಬಿಟ್ಟು ಎಲ್ಲಿಗೆ ಹೋದನೊ. ಸ್ವಲ್ಪ ಹೊತ್ತುನೋಡಿ, ಕಾರನ್ನ ಮನೆಗೆ ತಂದೆವು. ನಾನು ಊರಿಗೆ ಹೊರಡುವ ವೇಳೆ ಬಂತು.

ಎಲ್ಲರಿಗೂ ವಂದಿಸಿ ಕಾರನ್ನು ಸ್ಟಾರ್ಟ್ ಮಾಡಿದೆ. ಅದೇ ಪೊದೆಯ ಬಳಿ ಸ್ವಲ್ಪ ಹೊತ್ತು ನಿಲ್ಲಿಸಿ ನೋಡಿದೆ. ಅವನ ಸುಳಿವೇ ಇಲ್ಲ. ಮತ್ತೆ ಸುಮಾರು ದೂರ ಸವೆಸಿದ ಮೇಲೆ, ಗ್ಯಾರೇಜೊಂದನ್ನ ನೋಡಿ, ಅಲ್ಲಿ ಕಾರನ್ನು ಪರೀಕ್ಷಿಸಿದಾಗ, ಎಲ್ಲ ಸರಿಯಾಗಿಯೆ ಇತ್ತು. ಮತ್ತೆ ಹೊರಟು ಊರನ್ನು ಸೇರುವ ಮುಂಚೆ, ಹೆದ್ದಾರಿಯ ಬಳಿ ಮನೆ ಮಾಡಿ ವಾಸಿಸುತ್ತಿದ್ದ, ನಮ್ಮಿಬ್ಬರಿಗೂ ಸ್ನೇಹಿತನಾಗಿದ್ದವನ ಮನೆ ಇದ್ದದ್ದು ಜ್ಞಾಪಕಕ್ಕೆ ಬಂತು. ಅಲ್ಲಿಗೆ ಕಾರು ತಿರುಗಿಸಿದೆ. ಹೋಗಿ 'ಇಮ್ತಿಯಾಜ್' ಬಗ್ಗೆ ವಿಚಾರಿಸಿದೆ. ಅವನು ಕೊಟ್ಟ ವಿವರ ನನ್ನನ್ನು ದಂಗು ಬಡಿಸಿತು. ನನಗೆ ನಂಬಲಸಾಧ್ಯವಾಗಿತ್ತು. ನನ್ನ ವಿವರ ಅವನೂ ನಂಬಲಾರದಂತಾಗಿತ್ತು. ಅವನು ಎಲ್ಲ ದೇವರ ಮೇಲೂ ಆಣೆ ಮಾಡಿ ಹೇಳಿದ. ಇಮ್ತಿಯಾಜ್ ಕೊಲೆಯಾಗಿ ಇವತ್ತಿಗೆ ಅಂದರೆ – ಇದೇ ವೈಶಾಖ ಹುಣ್ಣಿಮೆಯ ದಿನ – ಮೂರು ವರುಷಗಳು ಸಂದುಹೋಗಿದ್ದವು. ಮಾತು ಕೇಳುತ್ತಲೇ ನಾನು ಅಲ್ಲೇ ಕುರ್ಚಿಯಲ್ಲಿ ಕುಸಿದು ಕುಳಿತೆ. ಸುಧಾರಿಸಿಕೊಂಡು ಮತ್ತೆ ಹೊರಟು ಇಲ್ಲಿ ನಿಮ್ಮೊಡನೆ ಸೇರುವ ವೇಳೆಗೆ ಸ್ವಲ್ಪ ತಡವಾಯಿತು.

''ಇದೀಗ ನೀವೇನು ಹೇಳುವಿರಿ?''. ಹೆದ್ದಾರಿಯಲ್ಲಿ ವಿಚಾರಿಸಬಂದವನು ಯಾರು? ಸತ್ತವನು ಎದ್ದುಬಂದನೇನು? ಸಹಾಯ ಮಾಡಿ, ಮಾಯವಾದನೇಕೆ?'' ಮತ್ತೆ ಗಾಢಮೌನ. ಯಾರಿಂದಲೂ ಮಾರುತ್ತರ ಬರಲಿಲ್ಲ! ಸಭೆ ಬರಖಾಸ್ತ್!

✵

---



SIEMENS

Authorised Hearing Care Centre

Do you need the best sound technology?

Serving you with quality & trust for more than a decade.




Whisper Hearing Aids Pvt. Ltd.

ವಿಸ್ಪರ್

1030/13, 25 main, 39 cross, 4th 'T' block,
**Jayanagara**, Bengaluru - 560041

**ph:** 080-26640571, 9741765454
www.hearingaidindia.in

**ಕಿವಿ - ಕೇಳುವ ಅಂಗವೇ ಆದರೂ ಅದರ ಒಂದು ಭಾಗ ನಮ್ಮ ದೇಹದ ಸಮತೋಲನ ಮಾಡುವ ಕೆಲಸ ನಿಭಾಯಿಸುತ್ತದೆ. ಕೇಳಿಸುವ ಭಾಗಕ್ಕೆ ತೊಂದರೆಯಾದರೆ ಕಿವುಡುತನ ಬರುತ್ತದೆ, ಹಾಗೆಯೇ ಉಳಿದ ಭಾಗಕ್ಕೆ ತೊಂದರೆಯಾದರೆ ತಲೆಸುತ್ತು ಕಿವಿಮೊರೆತ ಉಂಟಾಗುತ್ತದೆ. ಕಿವಿಮೊರೆತಕ್ಕೆ ಉಳಿದಂತೆ ಹಲವಾರು ಕಾರಣಗಳು ಇದ್ದರೂ ಈ ಸೂಕ್ಷ್ಮವಾದ ಅಂಗದ ತೊಂದರೆಯೇ ಬಹುಮಟ್ಟಿನ ಕಾರಣ. ಬಹಳ ಸಲ ಈ ತೊಂದರೆ ಔಷಧಿಗೆ ಒಗ್ಗದು. ಮೊರೆತ ಮುಚ್ಚುವಂತೆ ಶಬ್ದವನ್ನು ಹಿಯರಿಂಗ್ ಏಡ್ ಮೂಲಕ ಕೊಡಬೇಕಾಗುತ್ತದೆ. ಸದ್ಯಕ್ಕೆ ಅದೇ ಉತ್ತರ. ಕಿವಿಯ ಸೂಕ್ಷ್ಮತೆ ಕಡಿಮೆಯಾದ ನಂತರ ಹಿಯರಿಂಗ್ ಏಡ್ ಧರಿಸಿ ಎಲ್ಲರಂತೆಯೇ ಮಾತಿನ ಚಟುವಟಿಕೆಯಲ್ಲಿ ಭಾಗವಹಿಸಬೇಕು, ಅದು ಸಾಮಾನ್ಯ ಜೀವನ.**

**ಡಾ|| ಜಿ. ಪುರುಷೋತ್ತಮ ಇಡಿ.ಡಿ.**
**ವಾಕ್ - ಶ್ರವಣದೋಷ ತಜ್ಞ, ವಿಸ್ಪರ್ ವಾಕ್ - ಶ್ರವಣ ಕೇಂದ್ರ**

# ತೆರಿಗೆ ಹಲವು ಬಗೆ

**- ನೆಟ್‌ನಿಂದ ಹಾರಿಸಿದವರು = ಬೇಲೂರು ರಾಮಮೂರ್ತಿ**

ನೀವು ಏನು ಮಾಡುತ್ತಿದ್ದೀರಿ
ವ್ಯಾಪಾರ
ಹಾಗಾದರೆ ವೃತ್ತಿತೆರಿಗೆ ಕೊಡಿ

ವ್ಯಾಪಾರದಲ್ಲಿ ಏನು ಮಾಡುತ್ತಿದ್ದೀರಿ
ಪದಾರ್ಥಗಳನ್ನು ಮಾರಾಟ ಮಾಡುತ್ತಿದ್ದೇನೆ
ಹಾಗಾದರೆ ಮಾರಾಟ ತೆರಿಗೆ ಕೊಡಿ

ನೀವು ಪದಾರ್ಥಗಳನ್ನು ಎಲ್ಲಿಂದ ತರಿಸುತ್ತಿದ್ದೀರಿ
ಬೇರೆ ರಾಜ್ಯಗಳಿಂದ ಹಾಗೂ ಹೊರದೇಶಗಳಿಂದ
ಹಾಗಾದರೆ ಕೇಂದ್ರ ತೆರಿಗೆ, ಆಮದು ಸುಂಕ ಮತ್ತು ಆಕ್ಟ್ರಾಯ್ ಕಟ್ಟಿ

ನೀವು ಪದಾರ್ಥಗಳನ್ನು ಮಾರಿ ಎಷ್ಟು ಗಳಿಸುತ್ತಿದ್ದೀರಿ
ಹೆಚ್ಚಿನ ಆದಾಯ
ಹಾಗಾದರೆ ಆದಾಯ ತೆರಿಗೆ ಕೊಡಿ

ಲಾಭವನ್ನು ಹೇಗೆ ಹಂಚುತ್ತಿದ್ದೀರಿ
ಡಿವಿಡೆಂಡ್ ಕೊಟ್ಟು
ಹಾಗಾದರೆ ಡಿವಿಡೆಂಡ್ ಹಂಚಿಕೆ ತೆರಿಗೆ ಕೊಡಿ

ನೀವು ಪದಾರ್ಥಗಳನ್ನು ಎಲ್ಲಿ ತಯಾರಿಸುತ್ತಿದ್ದೀರಿ
ಕಾರ್ಖಾನೆಯಲ್ಲಿ
ಹಾಗಾದರೆ ಎಕ್ಸೈಸ್ ಸುಂಕ ಕೊಡಿ

ನಿಮ್ಮಲ್ಲಿ ಸಿಬ್ಬಂದಿ ಇದ್ದಾರೆಯೇ
ಇದಾರೆ
ಹಾಗಾದರೆ ವೃತ್ತಿ ತೆರಿಗೆ ಕಟ್ಟಿ

ನಿಮ್ಮ ವ್ಯಾಪಾರದಿಂದ ಅಧಿಕ ಹಣಕಾಸು ಬರುತ್ತಿದ್ದೆಯೇ
ಹೌದು
ಹಾಗಾದರೆ ಟರ್ನ್ ಓವರ್ ಟ್ಯಾಕ್ಸ್ ಕಟ್ಟಿ

ನೀವು ಬ್ಯಾಂಕಿನಿಂದ 25,000 ಸಾವಿರ ರೂಪಾಯಿಗೂ ಹೆಚ್ಚು ಹಿಂದಕ್ಕೆ ಪಡೆಯುತ್ತಿದ್ದೀರಾ
ಹಾದು
ಹಾಗಾದರೆ ಕ್ಯಾಷ್ ಹ್ಯಾಂಡ್ಲಿಂಗ್ ತೆರಿಗೆ ಕಟ್ಟಿ

ನೀವು ನಿಮ್ಮ ಅಧಿಕಾರಿಗಳನ್ನು ಊಟಕ್ಕೆ ಹೋಟೆಲಿಗೆ ಕರೆದುಕೊಂಡು ಹೋಗುತ್ತಿದ್ದೀರಾ
ಹೌದು
ಹಾಗಾದರೆ ಊಟ ಮತ್ತು ಮನರಂಜನೆ ತೆರಿಗೆ ಕಟ್ಟಿ

ನೀವು ವ್ಯಾಪಾರದ ನಿಮಿತ್ತ ಬೇರೆ ಊರಿಗೆ ಹೋಗುತ್ತಿದ್ದೀರಾ
ಹೌದು
ಹಾಗಾದರೆ ಫ್ರಿಂಜ್ ಬೆನಿಫಿಟ್ ಟ್ಯಾಕ್ಸ್ ಕಟ್ಟಿ

ನೀವು ಏನಾದರೂ ಸೇವೆಯನ್ನು ಪಡೆದಿದ್ದೀರಾ ಇಲ್ಲಾ ಕೊಡುತ್ತಿದ್ದೀರಾ
ಹೌದು
ಹಾಗಾದರೆ ಸರ್ವಿಸ್ ಟ್ಯಾಕ್ಸ್ ಕಟ್ಟಿ

ನಿಮಗೆ ಯಾರಾದರೂ ಗಿಫ್ಟ್ ಕೊಟ್ಟಿದ್ದಾರೆಯೇ ಇಲ್ಲ ನೀವೇ ಗಿಫ್ಟ್ ಕೊಟ್ಟಿದ್ದೀರಾ
ಹೌದು
ಹಾಗಾದರೆ ಗಿಫ್ಟ್ ಟ್ಯಾಕ್ಸ್ ಕಟ್ಟಿ

ನಿಮಗೆ ಅಧಿಕ ಸಂಪತ್ತು ಇದೆಯೇ
ಇದೆ
ಹಾಗಾದರೆ ಸಂಪತ್ತು ತೆರಿಗೆ ಕಟ್ಟಿ

ನಿಮ್ಮ ಟೆನ್ಷನ್ ಕಡಿಮೆ ಮಾಡಿಕೊಳ್ಳಲು ಮತ್ತು ಮನರಂಜನೆಗೆ ಎಲ್ಲಿ ಹೋಗುತ್ತಿದ್ದೀರಾ
ಸಿನಿಮಾ, ನಾಟಕ ಅಥವಾ ರೆಸಾರ್ಟ್‌ಗೆ
ಹಾಗಾದರೆ ಮನರಂಜನೆ ತೆರಿಗೆ ಕಟ್ಟಿ

ನೀವು ಯಾವುದಾದರೂ ಆಸ್ತಿ ಖರೀದಿಸುತ್ತಿದ್ದೀರಾ
ಹೌದು
ಹಾಗಾದರೆ ಸ್ಟ್ಯಾಂಪ್ ಡ್ಯೂಟಿ ಮತ್ತು ನೊಂದಣಿ ಶುಲ್ಕ ಕಟ್ಟಿ

ನೀವು ಪ್ರವಾಸ ಮಾಡುತ್ತಿದ್ದೀರಾ
ಹೌದು
ಹಾಗಾದರೆ ಸರ್ಛಾರ್ಜ್ ಕಟ್ಟಿ

ನೀವು ತಡವಾಗಿ ತೆರಿಗೆ ಕಟ್ಟುತ್ತಿದ್ದೀರಾ
ಕೆಲವೊಮ್ಮೆ ಹೌದು
ಹಾಗಾದರೆ ಬಡ್ಡಿ ಮತ್ತು ದಂಡ ಕಟ್ಟಿ

ಇನ್ನ್ಯಾವುದಾದರೂ ವಿಶೇಷ ತೆರಿಗೆ ಕಟ್ಟುತ್ತಿದ್ದೀರಾ
ಹೌದು ಯಾವುದದು
ಶೈಕ್ಷಣಿಕ, ಹೆಚ್ಚಿನ ಶೈಕ್ಷಣಿಕ ಶುಲ್ಕ ಮತ್ತು ಕೇಂದ್ರ ಸರ್ಕಾರದ ಎಲ್ಲಾ ತೆರಿಗೆಗಳ ಮೇಲೂ ಸರ್ಛಾರ್ಜ್

ಎಲ್ಲ ತರಹದ ತೆರಿಗೆಗಳನ್ನೂ ಕಟ್ಟಿಯಾಯ್ತು ನಾನು ಈಗ ನೆಮ್ಮದಿಯಿಂದ ಸಾಯಬಹುದೇ
ಸ್ವಲ್ಪ ತಾಳಿ
ಇನ್ನೇನು ಬಾಕಿ ಇದೆ

ಸಧ್ಯದಲ್ಲಿಯೇ ಅಂತ್ಯಸಂಸ್ಕಾರದ ತೆರಿಗೆ ಹಾಕುವವರಿದ್ದೇವೆ ನೀವು ಆಮೇಲೆ ಸಾಯಬಹುದು

✵

## ಎಲ್ಲಾ ಬ್ಯಾಲೆನ್ಸ್

ದೇವರು ವಿಶ್ವವನ್ನು ಸೃಷ್ಟಿ ಮಾಡುತ್ತಿದ್ದ ದಿನಗಳು.

"ನೋಡಿ ಎಲ್ಲವೂ ಸಮಯೋಚಿತವಾಗಿರಬೇಕು. ಪ್ರತಿ 10 ಜಿಂಕೆಗಳಿಗೆ ಒಂದು ಸಿಂಹ.."

ಮರಿ ದೇವರುಗಳು ಕೇಳಿಸಿಕೊಳ್ಳುತ್ತಿದ್ದರು.

"ನೋಡಿ. ಇದು ಅಮೆರಿಕ, ಇವರಿಗೆ ಅಪಾರವಾದ ಸಂಪತ್ತು ಸೌಲಭ್ಯ ಕೊಟ್ಟಿದ್ದೇನೆ. ಜತೆಗೆ ಅಭದ್ರತೆ ಮತ್ತು ಆತಂಕ. ಇದು ಆಫ್ರಿಕ, ಅದ್ಭುತ ಪ್ರಕೃತಿ ಸೌಂದರ್ಯ. ಆದರೆ ಹವಾಮಾನ ವೈಪರೀತ್ಯಗಳು. ಇದು ದಕ್ಷಿಣ ಅಮೆರಿಕ, ಬೇಕಾದಷ್ಟು ಅರಣ್ಯಗಳು. ಆದರೆ ಜಮೀನು ಕಡಿಮೆ. ಆದುದರಿಂದ ಅವರು ಅರಣ್ಯ ಕಡಿಯಲೇ ಬೇಕು. ಬ್ಯಾಲೆನ್ಸ್ ಆಗಬೇಕು ನೋಡಿ..."

"ದೇವಾ ಇದು ಯಾವ ದೇಶ?" ಒಂದು ಮರಿ ದೇವ ಕೇಳಿತು.

"ಆಹಾ, ಅದು ಭಾರತ. ನನ್ನ ಅತ್ಯಮೂಲ್ಯ ಸೃಷ್ಟಿ. ಅಲ್ಲಿನ ಜನ ಸ್ನೇಹಮಯಿ, ವಿಶಾಲ ಹೃದಯಿಗಳು. ಅದೆಷ್ಟು ನದಿಗಳು, ಪರ್ವತಗಳು, ಭವ್ಯ ಸಂಸ್ಕೃತಿ, ತಾಂತ್ರಿಕ ಜಗತ್ತಿನಲ್ಲಿ ದಾಪುಗಾಲು."

"ಆದರೆ ಎಲ್ಲಾ ಬ್ಯಾಲೆನ್ಸ್ ಇರಬೇಕು ಎಂದು ಹೇಳಿದರಲ್ಲಾ?" ಇನ್ನೊಂದು ಮರಿ ದೇವ ಬಾಯಿ ಹಾಕಿತು.

"ಖಂಡಿತ. ನೋಡಿ ಎಂತಹ ನೆರೆಹೊರೆ ಕೊಟ್ಟಿದ್ದೀನಿ" ಎಂದರು ಮೈನ್ ದೇವರು.

- **ಧೃತರಾಷ್ಟ್ರ**

## ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

– ದಂನಳ

- ಸ್ವರ್ಗಕ್ಕೆ ಹೋಗಲು ಬಯಸುವವರೂ ಸಹ ಸಾಯಲು ಇಷ್ಟಪಡುವುದಿಲ್ಲ.
- ಹೊಗಳಿದಾಗ ಮುಳುಗುತ್ತಿರುವ ಸೂರ್ಯ ಸಹ ಹುಟ್ಟುತ್ತಿರುವ ಸೂರ್ಯನಂತೆ ಕಾಣುತ್ತಾನೆ – ಹೊಗಳಿಸಿಕೊಂಡವರಿಗೆ. ಅದೇ ಸಣ್ಣ ಮಟ್ಟದಲ್ಲಿ ಟೀಕಿಸಿದಾಗ ಹೊಳೆಯುವ ಚಂದ್ರ ಸಹ ಮಧ್ಯಾಹ್ನದ ಸೂರ್ಯನಂತೆ ಕಾಣುತ್ತಾನೆ.
- ನೆನಪಿನ ಶಕ್ತಿ ಚೆನ್ನಾಗಿಲ್ಲದಿದ್ದಲ್ಲಿ ಸುಳ್ಳು ಹೇಳುವ ಸಾಹಸ ಮಾಡಬಾರದು.
- Think about what you think and then think.
- ನಿದ್ದೆ ಬರುತ್ತಿಲ್ಲವೆ? ಬನ್ನಿ ನನ್ನ ಪ್ರವಚನ ಕೇಳಿ.
- ಸಮತಟ್ಟಾದ ಪ್ರದೇಶದಲ್ಲಿರುವ ಗುಡ್ಡ ತಾನೇ ಪರ್ವತ ಎಂದುಕೊಳ್ಳುತ್ತದಂತೆ.
- ಕೈತುಂಬಾ ಕೆಲಸವಿದ್ದಾಗ ಮಾತ್ರ ಕಾಲಹರಣ ಸುಖವನ್ನು ಸಂಪೂರ್ಣವಾಗಿ ಅನುಭವಿಸಲು ಸಾಧ್ಯ.

**ಮೆಲುಕು ಹಾಕುವಂತಹ ಮಾತುಗಳ ಗುಚ್ಛ**

- Some cause happiness wherever they go; others whenever they go.
- ಟೀಕೆ ಮಾಡುವವರ ಮೂರ್ತಿಯನ್ನು ಯಾರೂ ಎಲ್ಲೂ ಸ್ಥಾಪಿಸುವುದಿಲ್ಲ. ಮೂರ್ತಿಗಳು ಟೀಕಿಸಿಕೊಂಡವರದ್ದು ಮಾತ್ರ.
- ದೇವರು ಖಂಡಿತ ಇದ್ದಾನೆ. ಏಕೆಂದರೆ ಅವನನ್ನು ನಿರ್ಮಿಸಿರುವುದು ಮನುಷ್ಯ.
- ನಂಬಿಕೆಯಿಂದ ಪರ್ವತವನ್ನು ತಳ್ಳಲು ಸಾಧ್ಯ. ಆದರೆ ಪ್ರಾರ್ಥನೆ ಮಾಡುವಾಗ ಪರ್ವತವನ್ನು ಅಲುಗಾಡಿಸುತ್ತಿರಲೇಬೇಕು.
- The best service the government provides is lip service.
- ಜಾದೂಗಾರನ ಶಕ್ತಿ ಇರುವುದು ಅವನಲ್ಲಲ್ಲ. ಅವನ ಚಮತ್ಕಾರಗಳನ್ನು ನಂಬುವ ಜನರಲ್ಲಿ. ಅವನಲ್ಲಿ ಶಕ್ತಿ ಇದೆ ಜನ ನಂಬುತ್ತಾರೆ. ಅದೇ ಅವನ ಶಕ್ತಿ.
- Scam ಬನೇಗ ಕ್ರೋರ್‌ಪತಿ

*

# ಅಲ್ಲಪ್ಪನ ವಚನಗಳು (ಇನ್ನೊಂದಿಷ್ಟು)

- ಹಾ.ರಾ.

ಮಣ್ಣಲ್ಲಿ ಹುಟ್ಟಿ ಮಣ್ಣಿಗೇ ಹೋಗುವವನ
ಮಣ್ಣಿನ ಪ್ರೀತಿ ಸಹಜ
ಮಣ್ಣಿನ ವಾಸನೆ ಅತಿ ತೀಕ್ಷ್ಣ ಅಲ್ಲಪ್ಪ||

ಬ್ರಹ್ಮಾಂಡ ಬೆಳಗಿತೆ ಹಣತೆ ದೀಪ ಹಚ್ಚಿದರೆ
ಬುವಿಯು ಮುಳುಗುವ ಮುನ್ನ ಸತ್ಯದರ್ಶನವಾಯ್ತು
ಕುಂಬಾರನಿಗಾಯ್ತು ಲಾಭ ಅಲ್ಲಪ್ಪ||

ನಾವೆಸೆವ ಚೆಂಡುಗಳು ಬರಿವೈಡು, ನೋಬಾಲು
ಸಚಿನ್ ಬ್ಯಾಟೆತ್ತಿದರೆ ಬೌಂಡ್ರಿ, ಸಿಕ್ಸರ್ರು
ಗಂಭೀರನಿಗೆ ದಕ್ಕಿತೆ ಸೆಂಚುರಿ ವಿಧಿಯಾಟ ಅಲ್ಲಪ್ಪ||

ಅದರು ಬಸಿರನು ಬಗೆದವರು
ಹಸಿರ ಕಿತ್ತೆಸೆದವರು, ಬಡವರ
ಗೋಳಿನಗಣಿಗಳ ಅದರಿಗೆ ಬೆದರುವರೆ ಅಲ್ಲಪ್ಪ||

ಊರು ಕೊಳ್ಳೆ ಹೊಡೆದ ಮೇಲೆ ಹಳೆಯ ಬ್ರಷ್ಟರು
ಕೋಟೆ ಬಾಗಲಿಗೆ ಹಾಕಿದರು ಬೀಗ
ಬೀಗದ ಕೈ ಕೊಟ್ಟರು ಹೊಸ ಬ್ರಷ್ಟರಿಗೆ ಅಲ್ಲಪ್ಪ||

ಕಬ್ಬಿನ ಹಾಲು ಕುದಿಸಿ ಪಾಕದೆಳೆ ನೋಡಿ
ಎರಕವಹುಯ್ದಂತೆ, ಬದುಕಿಗೆ ಬೇಕು
ಸಾಹಿತ್ಯ ಸಂಸ್ಕೃತಿಗಳ ರಸಪಾಕ ಅಲ್ಲಪ್ಪ||

ಸ್ವಾತಂತ್ರ್ಯದ ಕಿಚ್ಚು ಹಚ್ಚಿದನೊಬ್ಬ ಗಾಂಧಿ
ಬ್ರಷ್ಟಾಚಾರ ಹತ್ತಿಕ್ಕಲು ಕೈ ಎತ್ತಿನಿಂತನೊಬ್ಬ ಅಣ್ಣಾ
ಭಾರತದ ಇತಿಹಾಸ ಕಂಡ ವಿಸ್ಮಯಗಳಿವು ಅಲ್ಲಪ್ಪ||

ಬೇಲಿ ಎದ್ದು ಕೇರಿ ಮೇದೊಡೆ
ಗಣೆ ಭೂಪಂಜರದಿಂದ ಹಾರಿದೊಡೆ
ನಕ್ಷೆ ಕಕ್ಷಿಯನು ಕಾಯದೆ ಅಲ್ಲಪ್ಪ||

✵

# ಮಾರುತಿ ಪ್ರಣಯ ಪ್ರಸಂಗ

**- ನಾಗೇಶ್ ಹೆಗಡೆ**

**ಅಂ**ಗನವಾಡಿಯ ಹಿತ್ತಲಿನ ಪೊದೆಯಲ್ಲಿ ಮುನಿಯಂಕಟಪ್ಪ ಕುಕ್ಕರಗಾಲಿನಲ್ಲಿ ಕೂತು ಏನೋ ಮಾಡುತ್ತಿದ್ದ. ಅಂದರೆ ಅದಲ್ಲ, ಬೇರೆ ಏನೋ ಮಾಡುತ್ತಿದ್ದ. ಆಗಾಗ ಅವನ ಕೈ ಮೇಲಕ್ಕೆ ಹೋಗಿ ಕೆಳಕ್ಕೆ ಇಳಿಯುತ್ತಿತ್ತು. ಮುಂದಕ್ಕೆ ಹೋಗಿ ಹಿಂದಕ್ಕೆ ಬರುತ್ತಿತ್ತು.

ಸಮೀಪ ಹೋಗಿ ನೋಡಿದೆ. ಮುನಿಯಂಕಟಪ್ಪನೇ ಹೌದು. ''ಏನೋ ಅದೂ?'' ಎಂದು ಕೇಳಿಯೇಬಿಟ್ಟೆ. ಅದೇನೋ ''ಉಳ್ಳ್ ಕಟ್ತಾ ಇದೀನಿ'' ಅಂದ. ಸಪೂರ ನೈಲಾನ್ ದಾರವನ್ನು ಅಲ್ಲಿನ ಎರಡು ಪೊದೆಗಳ ಮಧ್ಯೆ ಸುತ್ತಿ ಕುಣಿಕೆ ಮಾಡುತ್ತಿದ್ದ. ಬಗ್ಗಿ ನೋಡಿದರೆ ಮೊಲವನ್ನೊ ಕಾಡುಬೆಕ್ಕನ್ನೊ ಸೆರೆಹಿಡಿಯಬಲ್ಲ ಉರುಳು. ಬಡಪಾಯಿ ಪ್ರಾಣಿ ಅದರಲ್ಲಿ ತಲೆ ತೂರಿಸಿದರೆ ಕತೆ ಮುಗಿದಂತೆಯೇ. ತಪ್ಪಿಸಿಕೊಳ್ಳಲು ಕೊಸರಾಡಿದಷ್ಟೂ ಆ ಉರುಳು ಬಿಗಿಯಾಗುತ್ತ ಪ್ರಾಣವನ್ನೇ ತೆಗೆಯುತ್ತದೆ.

ವನ್ಯಜೀವಿಗಳ ಬೇಟೆಯಾಡುವುದು ತಪ್ಪು ಅಷ್ಟೇ ಅಲ್ಲ, ಅದು ಭಾರೀ ದೊಡ್ಡ ಅಪರಾಧವೆಂದು ಹಿಂದೆಲ್ಲ ಹೇಳಿದ್ದು ವ್ಯರ್ಥವಾಗಿದ್ದಕ್ಕೆ ಅವನನ್ನು ಬೈದೆ. ಆದರೆ ಮುನಿವೆಂಕಟಪ್ಪ ಕೂಲಾಗಿದ್ದ. ಅದು ನಾಯಿ ಹಿಡಿಯಲು ಮಾಡಿದ ಉರುಳೆಂದು ಸಮಜಾಯಿಷಿ ನೀಡಿದ. ನನಗೆ ಅಚ್ಚರಿ. ಚೀನೀಯರ ಸಂಸ್ಕೃತಿ ಇಲ್ಲಿಗೂ ಬಂತೆ? ಮಟನ್, ಚಿಕನ್ ಜತೆ ನಾಯಿಗಳ ಮಾಂಸವನ್ನೂ ಹೊಟೆಲ್‌ಗಳಿಗೆ ಸಪ್ಲೈ ಮಾಡುತ್ತಾರೆಯೆ? ಇಷ್ಟಕ್ಕೂಉರುಳು ಹಾಕಿ ಹಿಡಿಯುವ ತಾಪತ್ರಯ ಯಾಕೆ? ಊರಿನ ಕಂತ್ರಿ ನಾಯಿಗಳನ್ನು ಹಿಡಿಯಬೇಕೆಂದಿದ್ದರೆ ರೊಟ್ಟಿಯ ತುಣುಕು ತೋರಿಸಿ ಕರೆದರೆ ಸಾಕು, ಬರುತ್ತವಲ್ಲ?

'ಇವು ಕಂತ್ರಿ ನಾಯಿ ಅಲ್ಲ ಸಾರ್! ಯಾರೋ ಬೇವರ್ಸಿಗಳು ಬೆಂಗಳೂರಿನ ಬೀದಿ ನಾಯಿಗಳನ್ನು ಇಲ್ಲಿ ತಂದು ಬಿಟ್ಟು ಹೋಗವ್ರೆ. ಭಲೇ ಡೇಂಜರ್ರು. ಮೊನ್ನೆ ಎಲ್ಲಾ ನಾಯಿಗಳೂ ಒಟ್ಟಾಗಿ ಮ್ಯಾಕೆ ಮರೀನ್ನ ತಿಂದ್‌ಬುಟ್ಟವೆ....' ಎಂದ.

ಬೆಂಗಳೂರಿಗೆ ಬೇಡವಾದದ್ದೆಲ್ಲ ಈ ಊರಿಗೆ ಬರುತ್ತದೆಂಬುದು ನಮಗೆ ಗೊತ್ತಿತ್ತು. ತಿಪ್ಪೆಗಳು, ಹಳೇ ಟಯರ್‌ಗಳು, ಅಪಾಯಕಾರಿ ಕಾರ್ ಬ್ಯಾಟರಿ ರೀಸೈಕಲ್ ಮಾಡುವ ಘಟಕಗಳು, ಕಟ್ಟಡ ನೆಲಸಮ ಮಾಡುವಾಗಿನ ಅವಶೇಷಗಳು ಎಲ್ಲವೂ ಈ ಊರಿನ ರಸ್ತೆ ಅಂಚಿಗೇ ಬಂದು ಠಿಕಾಣಿ ಹೂಡುತ್ತಿದ್ದವು. ನಾಯಿಗಳ ಸಂಗತಿ ಗೊತ್ತಿರಲಿಲ್ಲ. ನಿಜಕ್ಕೂ ಇವು ಬೆಂಗಳೂರಿನ ನಾಯಿಗಳೇ ಆಗಿದ್ದರೆ ಮೇಕೆ ಮರಿಯನ್ನು ಕಚ್ಚಿ ತಿಂದುದು ವಿಶೇಷವೇನೂ ಅಲ್ಲ. ಎಳೆ ಮಕ್ಕಳನ್ನೇ ಕಚ್ಚಿ ಕೊಂದ ಖ್ಯಾತಿ ಅಲ್ಲಿನ ಬೀದಿನಾಯಿಗಳಿಗಿದೆ.

'ಅಲ್ಲಯ್ಯಾ ಮುನಿಯಂಕ್ಟ, ನೀನು ಹಾಕಿದ ಉರುಳ ಕುಣಿಕೆಗೆ ಸಿಟಿ ನಾಯಿಯೇ ತಲೆ ಕೊಡುತ್ತದೆ ಅನ್ನೋದಕ್ಕೆ ಏನು ಗ್ಯಾರಂಟಿ? ಊರಿನ ಯಾವುದಾದರೂ ಒರಿಜಿನಲ್ ಕಂತ್ರಿ

ನಾಯಿಯೇ ಸಿಕ್ಕಿಕೊಂಡರೆ ಏನು ಮಾಡ್ತೀಯಾ?' ಕೇಳಿದೆ. ಆತ 'ನೋಡ್ತಾ ಇರಿ' ಎಂದನೇ ವಿನಾ ಗುಟ್ಟು ಬಿಟ್ಟುಕೊಡಲಿಲ್ಲ.

ಎರಡು ದಿನಗಳೂ ಕಳೆದಿರಲಿಲ್ಲ. ಬೆಂಗಳೂರಿನದೇ ಎನ್ನಬಹುದಾದ ದಷ್ಟಪುಷ್ಟ ನಾಯಿಯೊಂದು ಉರುಳಿನಲ್ಲಿ ಸಿಲುಕಿ ರಾಮಾ ರಂಪ ಎಬ್ಬಿಸಿತು. ಆದರೆ ಸಾಯಲಿಲ್ಲ. ಉರುಳನ್ನು ಕಟ್ಟಿದ್ದ ಸಣಕಲು ಪೊದೆಯನ್ನೇ ಕಿತ್ತು ಓಡಿತು. ಬಿಗಿಯಾದ ಉರುಳಿನಿಂದಾಗಿ ಕೂಗಲು ಆಗದೆ, ಕಂಡಕಂಡಲ್ಲಿ ಓಡುತ್ತಿದ್ದ ಅದಕ್ಕೆ ಕಂಡವರೆಲ್ಲ ಕಲ್ಲೆಸೆದರು. ಇತರ ನಾಯಿಗಳು ದಾಳಿ ಮಾಡಿದವು. ನೀರನ್ನೂ ಕುಡಿಯಲಾರದ ಅದು ಅತಿ ದಯನೀಯ ಸ್ಥಿತಿಯಲ್ಲಿ ಗಾಯ, ವ್ರಣ, ಹಸಿವೆಯಿಂದ ನರಳುತ್ತ ಬಿದ್ದಿತ್ತು. ಕರುಣೆಯಿಂದ ಅದರ ಉರುಳನ್ನು ಬಿಚ್ಚಲು ಹೋದರೆ ಗುರ್ರೆನ್ನುತ್ತಿತ್ತು. ಬೇರೇನೂ ದಾರಿ ಕಾಣದೆ ಬೆಂಗಳೂರಿನ ಪ್ರಾಣಿ ದಯಾ ಸಂಘಗಳಿಗೆ ಒಂದರ ಮೇಲೊಂದು ಫೋನ್ ಮಾಡಿದೆ. ಒಂದೊಂದರಿಂದ ಒಂದೊಂದು ಬಗೆಯ ನೆಪಗಳು ಬಂದವು. ''ನಾವು ವನ್ಯಜೀವಿಗಳಿಗೆ ಮಾತ್ರ ಶುಶ್ರೂಷೆ ಕೊಡುತ್ತೇವೆ'' ಎಂದು ಒಂದು ಸಂಸ್ಥೆಯವರು ಹೇಳಿದರೆ, ಇನ್ನೊಂದು ಸಂಸ್ಥೆಯವರು ''ನಾಯಿಯನ್ನು ಇಲ್ಲಿಗೇ ತನ್ನಿ'' ಎಂದರು. ಮೂರನೆಯದು ''ಬೆಂಗಳೂರಿನ ನಾಯಿಗಳಿಗೆ ಮಾತ್ರ ನಮ್ಮ ಸೇವೆ ಸೀಮಿತ'' ಎಂದಿತು. ಸದರಿ ನಾಯಿ ಬೆಂಗಳೂರಿನದ್ದೇ ಎಂದು ಹೇಳಿದರೂ ಅದಕ್ಕೆ ತಕ್ಕ ಪುರಾವೆ ನನ್ನಲ್ಲಿರಲಿಲ್ಲ. ಮತ್ತೆರಡು ದಿನ ನರಳಿ ನಾಯಿ ಸತ್ತುಹೋಯಿತು.

★★★

ದಸರಾ ಮುಗಿದು ಮೂರು ದಿನ ಆಗಿರಲಿಲ್ಲ. ಗುಟ್ಕಾ ಅಂಗಡಿಯ ಗುರುಸಿದ್ದ ಓಡೋಡಿ ಬಂದ. 'ಅಮ್ಮ-ಅಪ್ಪ ಕರೆದವ್ರೆ ವಸಿ ಬೇಗ ಬನ್ನಿ' ಎಂದು ಗೇಟ್‌ಬಳಿ ತೇಕುತ್ತ ಹೇಳಿದ. ಏನಾಯ್ತು, ಏನ್‌ಕತೆ, ಯಾಕೆ ಅರ್ಜೆಂಟು ಎಂಬ ಯಾವ ಪ್ರಶ್ನೆಗೂ ಉತ್ತರ ಹೇಳಲಾರದಷ್ಟು ಕಂಗಾಲಾಗಿದ್ದರೂ ಯಾರೋ ಬಂದವ್ರೆ, ಮಾರುತೀನ್ನ ಎತ್ತಾಕ್ಕಂಡ್ ವೋಯ್ತಾರಂತೆ, ಅಮ್ಮ ಅಳ್ತಾವ್ರೆ ಎನ್ನುತ್ತ ಮರಳಿ ಓಡಿದ.

ತುಸು ತುಸು ಅರ್ಥವಾಯಿತು. ಡಾಂಬರು ರಸ್ತೆಯ ಪಕ್ಕದ ಗೂಡಂಗಡಿಯ ಯಜಮಾನ ನಂಜಪ್ಪ ಒಂದು ಕೋತಿಮರಿಯನ್ನು ಸಾಕಿಕೊಂಡಿದ್ದ. ಎಲ್ಲೋ ಕಾಡಿನಲ್ಲಿ ಅಮ್ಮನಿಂದ ತಪ್ಪಿಸಿಕೊಂಡು ಬೆದರಿ ಮುದುರಿ ಕೂತಿತ್ತಂತೆ. ಅದನ್ನು ಎತ್ತಿ ತಂದು ಹಾಲು ಹಣ್ಣು ಕೊಟ್ಟು ಮನೆಯ ಮಕ್ಕಳಂತೆ ನೋಡಿಕೊಂಡಿದ್ದರು. ಹಳ್ಳಿಯ ಜನರಿಗೆಲ್ಲ ''ಮಾರುತಿ'' ಪರಿಚಿತನಾಗಿದ್ದ. ಆಗಾಗ ಅವನಿಗೆ ತಿಲಕ ಇಟ್ಟು, ಹೂಮಾಲೆ ತೊಡಿಸಿ ''ಆಂಜನೇಯಾ'' ಎಂದು ಮುದ್ದಾಡುತ್ತಿದ್ದರು. ಗೂಡಂಗಡಿಗೆ ಬಂದ ಗಿರಾಕಿಗಳೂ ಮಾರುತಿಯನ್ನು ಮಾತಾಡಿಸಿ ಬಿಸ್ಕಿಟ್, ಬಾಳೆಹಣ್ಣು ಖರೀದಿಸಿ ತಿನ್ನಿಸುತ್ತಿದ್ದರು. ಕೋತಿಯಿಂದಾಗಿ ನಂಜಪ್ಪನ ವ್ಯಾಪಾರವೂ ಕುದುರಿತ್ತು.

ನನಗೆ ಅಳುಕಿತ್ತು. 'ಸರಪಳಿ ಹಾಕಬೇಡಿ. ಯಾರಾದರೂ ವನ್ಯಪ್ರೇಮಿಗಳು ನೋಡಿದರೆ ತಕರಾರು ಮಾಡ್ತಾರೆ' ಎಂದು ಹಿಂದೊಮ್ಮೆ ಅವರಿಗೆ ಸಲಹೆ ಮಾಡಿದ್ದೆ. ಸರಪಳಿ ಯಾಕೆ ಬೇಕು ಎಂಬುದಕ್ಕೆ ನಂಜಪ್ಪ ವಿವರಣೆ ಕೂಡ ನೀಡಿದ್ದ. ನಾಯಿಗಳು ಜೋರಾಗಿ ಬೊಗಳಿದರೆ ಮಾರುತಿ ಗಾಬರಿಬಿದ್ದು ವಿದ್ಯುತ್ ಕಂಬದ ತುದಿಗೆ ಹೋಗಿ ಕೂತಿರುತ್ತಿದ್ದ. ಆತನನ್ನು ಕೆಳಕ್ಕಿಳಿಸಿ ಮನೆಗೆ ಕರೆದೊಯ್ಯುವುದೇ ದೊಡ್ಡ ಪ್ರಯಾಸದ ಕೆಲಸವಾಗುತ್ತಿತ್ತು. ''ಈಗ ಸರಪಳಿ ಹಾಕಿದ ಮೇಲೆ, ಹೆಚ್ಚೆಂದರೆ ಅಂಗಡಿಯ ಛಾವಣಿ ಏರಿ ಕೂತಿರ್ತಾನೆ, ನಮಗೆ ಹುಡುಕೋ ತಾಪತ್ರಯ ಇಲ್ಲ; ಸರಪಳಿಯಿಂದ ಅವನಿಗೆ ತೊಂದರೆ ಏನೂ ಇಲ್ಲ'' ಎಂದಿದ್ದ.

ಕೊನೆಗೂ ಅಂದುಕೊಂಡಂತೆ ಆಯಿತು. ಯಾರೋ ಕೊಟ್ಟ ದೂರನ್ನು ಕೇಳಿ ಬೆಂಗಳೂರಿನ ವನ್ಯಪ್ರೇಮಿ ಸಂಘದ ಯುವಕ-ಯುವತಿಯರು ಬೈಕ್ ಮೇಲೆ ಬಂದಿದ್ದರು. ಮಾರುತಿಯನ್ನು ಬಂಧಿಸಿ ಒಯ್ಯಲು ಸನ್ನದ್ಧರಾಗಿಯೇ ಬಂದಿದ್ದರು. ಕೋತಿ ಸಾಕುವುದು ಹಿಂಸಾಕೃತ್ಯವೆಂದೂ ಇದನ್ನು ತಮ್ಮ ಜತೆ ಒಯ್ದು ಬೇರೆ ಕೋತಿಗಳ ಜತೆ ಹೊಂದಾಣಿಕೆ ಮಾಡಿಸಿ ಕಾಡಿಗೆ ಬಿಡುತ್ತೇವೆಂದೂ ಧಮಕಿ ಹಾಕಿ ಕೂತಿದ್ದರು. ಮೊದಮೊದಲು ಅವರತ್ತ ಜೋರು ದನಿಯಲ್ಲಿ ಕೂಗಾಡಿದ ನಂಜಪ್ಪ ಕ್ರಮೇಣ ಮೆತ್ತಗಾಗಿದ್ದ. ನಗರದ ಯುವಕರ ಐಡಿ ಕಾರ್ಡ್ ಮತ್ತು ಇಂಗ್ಲಿಷ್‌ಗೆ ಹೆದರಿದ್ದ. ಅವನ ಪತ್ನಿ ಗಂಗಮ್ಮ ಅಳತೊಡಗಿದ್ದಳು. ಇವರ ನಡುವೆ ಪಂಚಾಯ್ತಿ ನಡೆಸುವ ಹೊಣೆ ನನ್ನ ಮೇಲೆ ಬಂದಿತ್ತು. ಗಂಗಮ್ಮ ಗದ್ಗದಿತಳಾಗಿ, ಮಾರುತಿ ತಮ್ಮ ಮನೆಯ ಮಗುವೇ ಆಗಿದೆಯೆಂದೂ, ತಮ್ಮ ಹಾಸಿಗೆಯಲ್ಲೇ ಮಲಗುತ್ತದೆಂದೂ, ತಾನು ಊರಲ್ಲಿರದಿದ್ದರೆ ಊಟ ಕೂಡ ಮಾಡುವುದಿಲ್ಲವೆಂದೂ ಬಿಕ್ಕುತ್ತ, ತೇಕುತ್ತ ವಿವರಿಸುತ್ತಿದ್ದಳು. ಜಪ್ತಿಗೆ ಬಂದ ತಂಡದ ಯುವತಿಯರ ಕಣ್ಣಲ್ಲೂ ತುಸು ನೀರಾಡಿತು. ಅದನ್ನು ನೋಡಿ ಇವಳ ಅಳು ಜೋರಾಯಿತು. ಮಾರುತಿ ಮಾರಾಯ ಕಣ್ಣು ಪಿಳುಕಿಸುತ್ತ ಅಂಗಡಿ ಸೂರಿನ ಮೇಲೆ ಕೂತಿದ್ದ.

ಆ ಯುವ ತಂಡದ ಜತೆ ವಾದ ಮಾಡಿ ಪ್ರಯೋಜನ ಇರಲಿಲ್ಲ. ಉರುಳಿಗೆ ಸಿಕ್ಕು ಸಾಯುತ್ತಿದ್ದ ನಾಯಿಯ ನೆರವಿಗೆ ಬಾರದವರು ಇಲ್ಲಿ ಖುಷಿಯಲ್ಲಿ ಕುಣಿಯುತ್ತಿದ್ದ ಕೋತಿಯನ್ನು ಎತ್ತೊಯ್ಯಲು ಬಂದಿದ್ದೇಕೆಂದು ಕೇಳುವಂತೆಯೂ ಇರಲಿಲ್ಲ. ಅವರೊಂದಿಗೆ ಒಂದು ಪ್ರಸ್ತಾವನೆ ಮುಂದಿಟ್ಟೆ. ''ಇನ್ನೆರಡು ವಾರ ಅವಕಾಶ ಕೊಡಿ, ನಿಮ್ಮ ಪ್ರಾಣಿದಯೆ ಈ ಗಂಗಮ್ಮನ ಮೇಲೂ ತುಸು ಇರಲಿ. ಮಾರುತಿಯನ್ನು ಅವಳಿಂದ ಹಠಾತ್ ಕಿತ್ತೊಯ್ಯುವುದು ಬೇಡ. ಕ್ರಮೇಣ ನಾನು ಇವರ ಮನವೊಲಿಸಿ ತಾವಾಗಿಯೇ ಇವರು ನಿಮ್ಮ ಸಂಸ್ಥೆಗೆ ಮಾರುತಿಯನ್ನು ತಂದೊಪ್ಪಿಸುವ ವ್ಯವಸ್ಥೆ ಮಾಡುತ್ತೇನೆ; ಬೇಕಿದ್ರೆ ಮನೇಕಾ ಗಾಂಧಿಗೆ ಇಮೇಲ್ ಮಾಡುತ್ತೇನೆ'' ಎಂದೇನೇನೋ ಹೇಳಿ ಯುವಜನರನ್ನು ಸಾಗಹಾಕಿದೆ.

ಜಪ್ತಿಗೆ ಬಂದವರು ಜಾಗ ಖಾಲಿ ಮಾಡಿದ ಮೇಲೆ ಗಂಗಮ್ಮ ಕಣ್ಣೊರೆಸಿಕೊಂಡು ಮಾತಿಗಿಳಿದಳು. ''ಮಾರುತಿ ಸುಖವಾಗಿ ಆಟ ಆಡ್ಕೊಂಡ್ ಬೆಳೀತಾ ಅವ್ನೆ, ಯಾರಿಗೂ

ತೊಂದ್ರೆ ಮಾಡಲ್ಲ. ಇವ್ನಿಗೂ ತೊಂದ್ರೆ ಇಲ್ಲ. ಆದ್ರೆ ಕಾಡಿಗೆ ಬಿಟ್ರೆ ಇವನು ಉಪಾಸ ಬಿದ್ದು ಸತ್ತೇ ಹೋಗ್ತಾನೆ. ಈ ಸಿಟಿಯೋರಿಗೆ ದಯೆ ಕರುಣೆ ಸೊಲ್ಪಾ ನೂ ಇಲ್ಲವಾ?'' ಕೇಳಿದಳು.

'ಹಾಗಲ್ಲಮ್ಮ, ಮಾರುತಿ ಬೆಳೀತಾ ಇದಾನೆ. ಇವನ ಆಟಕ್ಕೆ ಹೆಣ್ಣುಕೋತಿ ಬೇಕು; ಬೇರೆ ಕೋತಿಗಳ ಜಗಳ-ಪಗಳ ಆಡಬೇಕು; ಮಕ್ಕಳು ಮರಿ ಆಗಬೇಕು. ಅಂಥ ಸಹಜ ಜೀವನಕ್ಕೆ ಇಲ್ಲಿ ಅವಕಾಶ ಇಲ್ಲವಲ್ಲ...' ಎಂದೆ.

ಗಂಗಮ್ಮ ಕೆರಳಿದಳು. 'ಏನಂದ್ರಿ ಇನ್ನೊಮ್ಮೆ ಹೇಳಿ..... ಮಾರುತಿಗೆ ಹೆಣ್ಣುಕೋತಿ ಬೇಕಾ? ಅವನು ಮಾರುತಿ ಕಣ್ರೀ! ಹನುಮಂತ ದೇವರು. ಆಂಜನೇಯ ಸ್ವಾಮಿ ಅವತಾರ!' ಎಂದಳು. ಮತ್ತೆ, 'ಏನನ್ಕಂಡಾರೆ ಅವರು! ಇನ್ನೊಮ್ಮೆ ಅವರು ಈ ಊರಿಗೆ ಕಾಲಿಕ್ಕಿದ್ರೆ ಬೂತಾ ಬಿಡಿಸಿಬಿಡ್ತೀವಿ.... ನೀವೂ ಮದ್ಯ ತಲೆ ಹಾಕಬೇಡಿ. ಮಾರುತೀನ್ನ ಮಾತ್ರ ಕೊಡಂಗಿಲ್ಲ' ಎಂದು ಯುದ್ಧ ಸನ್ನದ್ಧಳಾದಳು.

ನಾನು ತಲೆ ಹಾಕುತ್ತ ಮೆಲ್ಲಗೆ ಅಲ್ಲಿಂದ ಕಾಲ್ತೆಗೆದೆ.

✵

---

## ಯಾರು ಎತ್ತರ

**ಮಾನಸಿಕ ಅಸ್ವಸ್ಥರ ಆಸ್ಪತ್ರೆಯಲ್ಲಿ ಬಿಡುಗಡೆಗೆ ಕಾದಿದ್ದ ಮೂರು ಜನರಿಗೆ ಕೊನೇ ಪರೀಕ್ಷೆ ಸಿದ್ಧವಾಗಿತ್ತು.**

ಮೂರು ಕುರ್ಚಿಗೆ ಹಸಿರು ಬಣ್ಣ ಬಳಿದು ಒಂದರ ಮುಂದೊಂದರಂತೆ ಇಟ್ಟಿದ್ದರು. ಬಣ್ಣ ಇನ್ನೂ ಹಸಿಯಾಗಿತ್ತು. ಮೂವರನ್ನೂ ಕುರ್ಚಿಯಲ್ಲಿ ಕೂತ್ಕೊಳೋಕೆ ಹೇಳಿದರು. ಆದರೂ ಮೊದಲು ಬಂದ ಇಬ್ಬರು ಹಾಗೇ ಕೂತುಬಿಟ್ಟರು. ಆದರೆ ಮೂರನೆಯವನು ಕುರ್ಚಿಯ ಹತ್ತಿರ ಬಂದು ಇವರಿಬ್ಬರನ್ನು ನೋಡಿ ನಂತರ ಹೋಗಿ ವೃತ್ತಪತ್ರಿಕೆಯ ಹಾಳೆ ತಂದು ಕುರ್ಚಿಯ ಮೇಲೆ ಹಾಕಿ ಕೂತ್ಕೊಂಡ. ವೈದ್ಯರಿಗೆ ತುಸು ಸಮಾಧಾನವಾಯಿತು. ಯಾಕೆ ಹಾಗೆ ಮಾಡಿದೆ ಅಂತ ಕೇಳಿದಾಗ ಮೂರನೆಯವನು ಪೇಪರ್ ಹಾಕಿ ಕೂತ್ಕೊಂಡ್ರೆ ಎತ್ತರದಲ್ಲಿರ್ತೀನಿ, ಆಗ ಮುಂದುಗಡೆ ಏನು ನಡೀತಿರುತ್ತೆ ಅಂತ ಚೆನ್ನಾಗಿ ಕಾಣುತ್ತೆ ಅಂದಾಗ ವೈದ್ಯರು ಮೂರ್ಛೆ ಹೋದರು.

ಹುರುಳಿ ಕಟ್ಟು.

# ಸಜ್ಜನಿಕೆಗೆ ಅರ್ಥ.....

**- ಎಚ್. ಗೋಪಾಲಕೃಷ್ಣ**

**ನನ್ನ** ಗೆಳೆಯರೊಬ್ಬರು ಆಗಾಗ ಅವರ ಸಹೋದ್ಯೋಗಿಗಳ ಸ್ವಾರಸ್ಯವಾದ ಕಥೆಗಳನ್ನು ನನಗೆ ಹೇಳುತ್ತಿರುತ್ತಾರೆ. ಮೊನ್ನೆ ಅವರು ಹೇಳಿದ ಕಥೆ ಇದು. ಕತೆ ಮೊದಮೊದಲು ನನಗೆ ತಮಾಷೆಯೆನಿಸಿತು. ನಂತರ ಅವರ ಸಹೋದ್ಯೋಗಿಯ ಬಗ್ಗೆ ಅಭಿಮಾನ ಹುಟ್ಟಿತು. ಈಗ ಆ ಕಥೆ - ತಮಗೆ...

ನನಗೆ ತಿಳಿದಿರುವ ಒಬ್ಬರು ಹಿರಿಯರು ಇದ್ದಾರೆ. ಲೆಕ್ಕ ಪತ್ರ ವಿಭಾಗವನ್ನು ಇವರು ನೋಡಿಕೊಳ್ಳುವುದು. ಲೆಕ್ಕದಲ್ಲಿ ಬಹಳಾ ಚೂಟಿಯಾಗಿದ್ದಾರೆ. ಕೈಬೆರಳಿನ ತುದಿಯಲ್ಲಿ ಮ್ಯಾಥಮ್ಯಾಟಿಕ್ಸ್‌ನ, ಬಡ್ಡಿ ಲೆಕ್ಕ ಹಾಕುವ ಅವರನ್ನು ನೋಡಿದಾಗಲೆಲ್ಲಾ ನನಗೆ ಅವರಿಗೆ ಬರುವ ಹಾಗೆ ಲೆಕ್ಕ ಹಾಕಲು ನನಗೆ ಬರುವುದಿಲ್ಲವೇ ಅಂತ ಸಂಕಟವಾಗುತ್ತೆ.

ಆದರೆ ಅವರ ಮತ್ತೊಂದು ಮುಖ ನೋಡಿದಾಗ ಲೆಕ್ಕ ಬರದಿದ್ದುದ್ದೇ ಚೆನ್ನ ಅಂತ ಅನಿಸಿಬಿಡುತ್ತೆ. ಇದಕ್ಕೆ ಕಾರಣ ಅಂದರೆ ತಾವು ಮಾಡಿದ ತಪ್ಪನ್ನು ಈ ಹಿರಿಯರು ಎಂದೂ ಒಪ್ಪುವುದೇ ಇಲ್ಲ!

'ಸಾರ್ ತಪ್ಪು ಮಾಡೋದು ಮನುಷ್ಯ ಸಹಜ,ಆಗಿರೋ ತಪ್ಪನ್ನು ತಿದ್ದಿಕೊಳ್ಳುವುದು ಏನೂ ಅಸಾಧ್ಯ ಅಲ್ಲವಲ್ಲ...' ಅಂತ ನನ್ನ ವಾದ. ಸರಿ ಸುಮಾರಾಗಿ ಈ ತಪ್ಪುಗಳು ಆಗುತ್ತಾ ಇದ್ದದ್ದು ಅವರು ಮಾಡುವ ಫೈನಲ್ ಲೆಕ್ಕಗಳಲ್ಲಿ. ಅಂದರೆ ಯಾರಿಗೋ ಇನ್ನೂರು ರೂಪಾಯಿ, ಮುನ್ನೂರು ಹೆಚ್ಚು ಲೆಕ್ಕ ಹಾಕಿ ಅದನ್ನು ಹಠಹಿಡಿದು ವಸೂಲು ಮಾಡುತ್ತಿದುದು. ಹೆಚ್ಚು ಹಣ ಕೊಡಬೇಕಾದವರು ಲೆಕ್ಕದಲ್ಲಿನ ತಪ್ಪು ತೋರಿಸಿ ಇಲ್ಲಿ ಲೆಕ್ಕ ಸರಿಯಾಗಿಲ್ಲ ಅಂತ ವಾದಿಸಿದರೆ ಅದನ್ನು ವಿವರಿಸುತ್ತಿದ್ದರಾದರೂ ಅದು ಕನ್ ವಿನ್ಸಿಂಗ್ ಆಗುತ್ತಿರಲಿಲ್ಲ, ಅದಕ್ಕೆ ಅವರ ಸಮಜಾಯಿಷಿ ಬೇರೆ ರೀತಿ.

'ಒಂದು ಸಲ ಬಿಲ್ ಹಾಕಿದ ಮೇಲೆ ಆಯಿತು, ಅದನ್ನ ಬದಲಾಯಿಸೋ ಹಾಗಿಲ್ಲ.'

'ಇದು ಯಾವ ನ್ಯಾಯ ? ನಿಮಗೇ ಹೀಗೆ ಹೆಚ್ಚು ವಸೂಲಿಯಾದರೆ ನಿಮಗೆ ಸರಿ ಅನಿಸುತ್ತಾ?'

ಇದು ನನ್ನ ಪ್ರಶ್ನೆ.

'ಆಡಿಟ್ ಆಬ್ಜೆಕ್ಷನ್ ಬರುತ್ತೆ, ನಿಮಗೆ ಗೊತ್ತಾಗುಲ್ಲ..'

'ಆಡಿಟ್‌ನವರಿಗೆ ನಾವು ತಪ್ಪು ಮಾಡಿದೀವಿ ಅಂತ ಹೇಳಿದರೆ ಆಯಿತಲ್ಲಾ....'

ಇದಕ್ಕೆ ಅವರ ಬಳಿ ಸೂಕ್ತ ಉತ್ತರವೂ ಇರಲ್ಲ!

ಬ್ರಹ್ಮ ನೀವು, ನಿಮ್ಮ ಲಿಪಿ ಬದಲಾಯಿಸಲು ಸಾಧ್ಯವೇ ಇಲ್ಲ ಅಂತ ಅವರಿಗೆ ನಾನು ತಮಾಷೆ ಮಾಡುವುದು.

ಅವರು ಪ್ರತಿಯೊಂದು ಬಿಲ್ ಬರೆದಾಗಲೂ 'ಆಹಾ ಬ್ರಹ್ಮ ಬಿಲ್ ಬರೆದಾಯಿತು. ಇನ್ನು ಯಾರು ಬಂದರೂ ಅದನ್ನು ಬದಲಾಯಿಸುವ ಹಾಗೇ ಇಲ್ಲ...' ಅಂತ ಅವರಿಗೆ ಕೇಳಿಸುವ ಹಾಗೆ ಹೇಳಿ ಅವರನ್ನ ಪರೋಕ್ಷವಾಗಿ ಬ್ರಹ್ಮ ಅಂತ ಕರೆದು ನಾಲಿಗೆ ಚಟವನ್ನು ಕೊಂಚ ಮಟ್ಟಿಗೆ ತೀರಿಸಿಕೊಳ್ಳುವುದು ನನಗೆ ಒಗ್ಗಿಹೋಗಿತ್ತು.

ಅವರ ದಿನನಿತ್ಯದ ಕೆಲಸದ ಜತೆಗೆ ಅವರು ನಮ್ಮಲ್ಲಿ ಯಾವುದೇ ಪೂಜೆ ಪುನಸ್ಕಾರ ನಡೆದರೂ ಅದರಲ್ಲಿ ಮುಖ್ಯ ಪೂಜಾರರ ಪಾತ್ರವಹಿಸುತ್ತಾರೆ. ಕೈನಲ್ಲಿ ಒಂದು ಮಂತ್ರದ ಪುಸ್ತಕ ಹಿಡಿದು ಅದರಲ್ಲಿನ ಮಂತ್ರಗಳನ್ನು ಯಾರಿಗೂ ಕೇಳಿಸದ ಹಾಗೆ – ನಮಗೆ ಬರೀ ಮಣಮಣ ಅಂತ ಕೇಳಿಸಬೇಕು ಹಾಗೆ – ಮಂತ್ರೋಚ್ಚಾರಣೆ ನಡೆಯುತ್ತದೆ. ಅದರ ನಂತರ ಮಂಗಳಾರತಿ, ಅದಕ್ಕೆ ದಕ್ಷಿಣೆ. ನಂತರ ದಕ್ಷಿಣೆ ಹಣವನ್ನು ಜೋಪಾನವಾಗಿ ಎಣಿಸಿ ಅದನ್ನು ಒಂದು ಕವರಿನಲ್ಲಿ ಹಾಕಿ ಇಟ್ಟುಕೊಳ್ಳುವುದು... ಈ ಸಮಯದಲ್ಲಿ ಅವರೊಂದಿಗೆ ಅವರನ್ನು ರೇಗಿಸಲು ಒಂದೆರೆಡು ಮಾತು..

'ನಿಮಗೆ ಮಂತ್ರ ಬಾಯಿಗೆ ಬರುತ್ತಾ?ಅಷ್ಟು ವರ್ಷಗಳಿಂದ ಮಂತ್ರ ಹೇಳ್ತಿದ್ದೀರೀ.. ಈಗಲೂ ಪುಸ್ತಕ ಹಿಡಿದುಕೊಂಡೇ ಹೇಳ್ತೀರಲ್ಲಾ?' 'ಬಾಯಿಗೆ ಬಂದರೂ ಅದರ ಆಚರಣೆಯಲ್ಲಿ, ಉಚ್ಚಾರಣೆಯಲ್ಲಿ ತಪ್ಪು ಆಗಬಾರದು. ಅದಕ್ಕೋಸ್ಕರ ಪುಸ್ತಕ ಕೈಯಲ್ಲೇ ಇಟ್ಟುಕೊಂಡು ಹೇಳೋದು...'

ಅವರೇನು ಅವರು ಮಾಡಿದ್ದಕ್ಕೆಲ್ಲಾ ನನಗೆ ವಿವರಣೆ ನೀಡಬೇಕಿಲ್ಲವಾದರೂ ಅವರನ್ನು ರೇಗಿಸಲು ನಾನು ಪ್ರಶ್ನೆ ಕೇಳುವುದು, ಅವರು ಮೊದಲು ಸಾವಧಾನದಿಂದ ಉತ್ತರಿಸಲು ಯತ್ನಿಸುವುದು, ಅವರ ಉತ್ತರ ನನಗೆ ಸಮಾಧಾನ ತರಲಿಲ್ಲ ಎಂದಾದಾಗ ಬೇಸರದಿಂದ ಮಾತು ನಿಲ್ಲಿಸುವುದೋ ಅಥವಾ ಬೇರೆಡೆಗೆ ಹೊರಳಿಸುವುದೋ ನಡೆಯುತ್ತೆ.

'ಬ್ರಹ್ಮ ಕೆಲಸಕ್ಕೆ ಬಂತು, ಬ್ರಹ್ಮ ಈಗ ಮನೆಗೆ ಹೋಯಿತು, ಬ್ರಹ್ಮ ಈಗ ಬ್ಯಾಂಕಿಗೆ ಹೋಗ್ತಿದೆ....' ಹೀಗೆ ನಾನು ಒಳಗೊಳಗೇ ಅವರನ್ನು ಅವರಿಗೆ ಗೊತ್ತಾಗುವ ಹಾಗೆ ಗೊತ್ತಾಗದಿರುವ ಹಾಗೆ ತಮಾಷೆ ಮಾಡಿ ಒಂದು ರೀತಿಯ ಸಂತೋಷವನ್ನೂ ಪಡುತ್ತೇನೆ.

ಕಳೆದವಾರ ಅವರ ಮತ್ತೊಂದು ಮುಖ ಕಾಣುವ ಅವಕಾಶ ಒದಗಿತು. ಪೂಜಾ ಸಮರಂಭವೊಂದರಲ್ಲಿ ಎಂದಿನ ಹಾಗೆ ಇವರೇ ಛೀಫು. ಪೂಜೆ ಮುಗಿದು ಮಂಗಳಾರತಿ ತಟ್ಟೆ ಹಿಡಿದು ಎಲ್ಲರಿಗೂ ಮಂಗಳಾರತಿ ನೀಡಿದರು. ಹತ್ತು ಐದು ನೂರರ ನೋಟುಗಳು ಹಾಗೂ ಸುಮಾರು ನಾಣ್ಯದ ಸಂಗ್ರಹಣೆಯಾಯಿತು. ಇದನ್ನೆಲ್ಲ ಒಂದು ಕರ್ಛೀಫಿನಲ್ಲಿ ಕಟ್ಟಿಕೊಂಡು ಬಂದು ಎದುರಿಗೆ ಕೂತರು. ಹಣ ಆಚೆ ತೆಗೆದು ಟೇಬಲ್ಲಿನ ಮೇಲೆ ಸುರುವಿಕೊಂಡು ಎಣಿಸಲು ಅರಂಭಿಸಿದರು.

'ಐನೂರ ಅರವತ್ತೊಂದು ರೂಪಾಯಿ ಐವತ್ತು ಪೈಸೆ ಸಾರ್....' ಅಂದರು – ಹಣ ಎಣಿಕೆ ನಂತರ.

‘ಪರವಾಗಿಲ್ಲ, ಚೆನ್ನಾಗೇ ಬಂದಿದೆ.... ಬನ್ನಿ ಪಾರ್ಟಿ ಮಾಡಿಬಿಡೋಣಾ....’ ಅಂದೆ.

‘ಊಹೂಂ.. ಇಲ್ಲ ಈ ದುಡ್ಡು ನನ್ನದಲ್ಲ...’

ನನಗೆ ಶಾಕ್ ಹೊಡೆದ ಹಾಗಾಯಿತು.

‘ಪೂಜೆ ಮಾಡಿದವರು ನೀವು, ಮಂಗಳಾರತಿ ಕೊಟ್ಟೋರು ನೀವು... ಈ ಹಣ ನಿಮಗೇ ಸೇರಬೇಕಲ್ಲವಾ?’

‘ಇಲ್ಲ ಸಾರ್, ಇದು ದೇವಸ್ಥಾನದ ಪೂಜಾರರಿಗೆ ಸೇರಬೇಕು. ಅವರು ಮಾಡುವ ಕೆಲಸವನ್ನ ಅವರ ಪರವಾಗಿ ನಾನು ಮಾಡಿದ್ದೀನಿ. ಅವರು ಇಲ್ಲೀಗೆ ಬರುಕ್ಕೆ ಆಗುಲ್ಲ ಅಂತ ನಾನು ಪೂಜೆ ಮಾಡಿದ್ದು. ಅವರು ಬಂದಿದ್ದರೆ ಅವರಿಗೇ ತಾನೇ ಇದು ಸೇರುತ್ತಿತ್ತು... ಯಾವಾಗ ಪೂಜೆ ಮಾಡಿದರೂ ಅದಕ್ಕೆ ಬಂದ ದಕ್ಷಿಣೆಯನ್ನ ಪೂಜಾರರಿಗೇ ಕೊಟ್ಟುಬಿಡ್ತೀನಿ, ಮೊದಲಿಂದಲೂ ಹಾಗೇ ಮಾಡ್ತಿದೀನಿ.....’

ವಾದ ಮಾಡಿ ಅವರಿಗೆ ಹಣ ನಿಮ್ಮದೇ ನಿಮಗೆ ಬೇಕಾದ ಹಾಗೆ ಖರ್ಚು ಮಾಡಬಹುದು ಅಂತ ವಾದ ಗೆಲ್ಲ ಬಹುದಿತ್ತು.... ಅವರು ವಾದದಲ್ಲಿ ಸೋತರೂ ಪೂಜಾರರಿಗೇ ಹಣ ಸೇರುತ್ತಿದುದು ಅಂತಲೂ ತಿಳಿದಿತ್ತು. ಆದರೂ ವಾದ ಮಾಡಲಿಲ್ಲ,ಅವರನ್ನು ಗೆಲ್ಲಲು ಯತ್ನಿಸಲಿಲ್ಲ.

ಅವರ ಮನಸ್ಸಿನಲ್ಲಿನ ಇಂತಹ ಆರ್ದ್ರ, ಅಪೂರ್ವ ಭಾವನೆಯನ್ನು ಹಾಳು ಮಾಡಬಾರದು, ಸಜ್ಜನಿಕೆಗೆ ಅವರ ಅರ್ಥ ಇದೇ ಆಗಿರಬಹುದು, ಅದನ್ನು ಬೇರೆ ರೀತಿಯಲ್ಲಿ ಹೋಗುವಂತೆ ಮಾಡುವುದು ಸರಿಯಲ್ಲ ಅನಿಸಿಬಿಡಬೇಕೇ? ವಾದದಲ್ಲಿ ಗೆದ್ದು ಅವರು ಮುಂದೆ ಪೂಜಾರರಿಗೆ ಹಣ ಕೊಡದೇ ಇವರೇ ಉಪಯೋಗಿಸಿಕೊಂಡು ಯಾವುದೋ ಘಳಿಗೆಯಲ್ಲಿ ನನ್ನ ಮನಸನ್ನು ಇಂತಹವನು ಹಾಳು ಮಾಡಿಬಿಟ್ಟ ಅಂತ ನನಗೆ ಶಾಪ ಹಾಕೋದು ಸರಿಯಿರುತ್ತಾ? ಇದು ಒಂದು ವರಸೆಯಾದರೆ ನಾಳೆ ಪೂಜಾರರಿಗೆ ಇದು ತಿಳಿದರೆ ಅವರು ನನ್ನ ಮುಖವೇ ನೋಡಿರದಿದ್ದರೂ ನನ್ನ ಬಗ್ಗೆ ಏನು ಅಂದುಕೋಬಹುದು? ತೆಪ್ಪಗಾಗಿಬಿಟ್ಟೆ ಇವರೇ. ಬ್ರಹ್ಮ ನನ್ನ ಬಾಯಿ ಮುಚ್ಚಿಸಿಬಿಟ್ಟಿದ್ದ !

ಅವರ ಕೃತ್ಯಕ್ಕೆ ಯಾರ ಬಾಯಾದರೂ ಮುಚ್ಚಲೇ ಬೇಕು.. ಅಂದೆ !

✵

---

**ಲೇಖಕರಲ್ಲಿ ವಿನಂತಿ**

ದಯವಿಟ್ಟು ನಿಮ್ಮ ಲೇಖನಗಳನ್ನು ನುಡಿ ಅಥವಾ ಬರಹ ತತ್ರಾಂಶ ಬಳಸಿ ಕಳುಹಿಸಿ. ಹಸ್ತಪ್ರತಿಯನ್ನು ಸ್ವೀಕರಿಸುವುದು ಕಷ್ಟವಾಗುತ್ತದೆ. ಈ ನಿಟ್ಟಿನಲ್ಲಿ ನಿಮ್ಮ ಸಹಕಾರಕ್ಕಾಗಿ ಧನ್ಯವಾದಗಳು.

# ನೀ ನಾತದೊಳಗೋ ನಿನ್ನೊಳಗೆ ನಾತವೋ!

**– ವಾಣೀ ಸುರೇಶ್**

**ಸ್ಪ್ರಿಂ**ಗ್ ಮುಗಿದು ಮೇ–ಜೂನ್ ತಿಂಗಳ ಬಟ್ಟ ಬೇಸಗೆಯ ಸೆಖೆ ದಿನಗಳು. ಅವತ್ತು ರಾತ್ರಿ ಊಟ ಮುಗಿದ ಮೇಲೆ ಹತ್ತೂಮುಕ್ಕಾಲಾದ್ರೂ ತಂಪಾದ ಗಾಳಿ ಬೀಸ್ತಿತ್ತೂಂತ ಸಿಟ್ ಔಟಲ್ಲಿ ಕೂತ್ಕೊಂಡು ಲ್ಯಾಪ್ ಟಾಪಲ್ಲಿ ಬ್ರೌಸ್ ಮಾಡ್ತಾಯಿದ್ದೆ. ನಮ್ಮ ಬದ್ರಿ (Buddy ಹೆಸರಿನ ಅಪಭ್ರಂಶದ ನಮ್ಮ ಲ್ಯಾಬ್ರಡಾರ್ ರಿಟ್ರೀವರ್ ನಾಯಿ) ಮೊಲಾನ್ನೋ, ಗ್ರೌಂಡ್ ಹಾಗನ್ನೋ ಏನೋ, ಅಟ್ಟಾಡಿಸಿಕೊಂಡು ತೋಟದ ಹೂವಿನ ಪೊದೆಗಳ ಮಧ್ಯೆ ನೆರೆದಿದ್ದ ಮಿಣುಕು ಹುಳಗಳ ಜಾತ್ರೆಯಲ್ಲಿ ಸಂಭ್ರಮ ಪಡುತ್ತಿತ್ತು. ಒಟ್ನಲ್ಲಿ ಎಲ್ಲೆಲ್ಲೂ ಒಂದು ತರದ 'ಆಲ್ ವೆಲ್' ಎನ್ನುವಂಥಾ ವಾತಾವರಣ.

ಆದ್ರೆ ಆ ನೆಮ್ಮದಿ ಹೆಚ್ಚು ಹೊತ್ತಿರಲಿಲ್ಲ ನೋಡಿ!

ಬದ್ರಿ ಇದ್ದಕ್ಕಿದ್ದ ಹಾಗೇ ಗಾಬರ್ ಗಾಬರಿಯಾಗಿ ಏದುಸಿರು ಬಿಡ್ತಾ ಓಡ್ಬಂದು ನನ್ನ ಕಾಲ ಹತ್ರ ಬಿದ್ದು ಹೊರಳಾಡಕ್ಕೆ ಶುರು ಮಾಡಿತು! ಸಿಕ್ಕಿಸಿಕ್ಕಿದ್ದಕ್ಕೆ ಮೂತಿ ಉಜ್ಕೊಂಡು ಒದ್ದಾಡ್ತಿದ್ದಿದ್ದರ ಜೊತೆಗೆ, ಹಾವೋ ಚೇಳೋ ಕಚ್ಚಿದ್ಯೇನೋಂತನ್ನಿಸೋ ಹಾಗೆ ಅದರ ಬಾಯಲ್ಲಿ ಒಂಚೂರು ನೊರೆ! ಅಲ್ದೇ, ಗೊಬ್ಬರದ ಲಾರಿ ಹೋದಾಗ ನಮ್ಮೂರಲ್ಲಾಗ್ತಲ್ಲ ಅದೇ ತರ, ಎಂಥದ್ದೋ ಒಂದು ರೀತಿಯ ಗಬ್ಬುನಾತ ದಶದಿಕ್ಕುಗಳಿಗೂ ಹರಡ್ತಿದ್ದಿದ್ದು ಬೇರೆ – ಆ ನಾತದ ಘಾಟಿಗೂ, ಬದ್ರಿಯ ವಿಚಿತ್ರ ನಡವಳಿಕೆಗೂ ಸಂಬಂಧ ಇರ್ಲೇಬೇಕೂಂತ ಎಂಥಾ ಬೆಪ್ಪುತಕ್ಕಡೀಗೂ ಅನ್ನಿಸಬೇಕು! ಹಾಗೆ, ಸಾಲದ್ದಕ್ಕೆ ಈ ದೇಶದಲ್ಲೂ ಅದ್ಯಾರೋ ಟೈರ್ ಬೇರೆ ಸುಡಕ್ಕೆ ಹೊರಟ್ಹಾಗಿತ್ತು ಅಷ್ಹೊತ್ತಲ್ಲಿ!

ಆದ್ರೆ ನೋಡ್ತೀನಿ, ಬದ್ರಿಯ ತಲೆ ಮೇಲಿಂದಲೇ ಆ ಗಬ್ಬು ವಾಸ್ನೆ ಬರ್ತಿದೆ!

ಮಕ್ಕಳು ಕೆಲಸದ ನಿಮಿತ್ತ ವಿದೇಶಕ್ಕೆ ಹೋಗಿದ್ರಿಂದ ಮನೇಲಿ ನಾವಿಬ್ರೇ ಬೇರೆ. ಸರಿ, ತಕ್ಷಣ ಬೀಜಿನ್ಗಿಗೆ ಫೋನು ಮಾಡಿದೆ. ಹೀಗ್ಹೀಗಾಗಿದೆಯಲ್ಲ ಏನಿರಬಹುದು, ಏನ್ಮಾಡೋದೂಂತ – ಅಂತ. ಮೊದಲ ಪ್ರತಿಕ್ರಿಯೆಯಾಗಿ ಆಕಡೆಯಿಂದ ಆತಂಕ ಮಿಶ್ರಿತ ನಗುವಿನೊಂದಿಗೆ – ''ವಾಸನೆ ಅಂದೆಯಲ್ಲ ಅದು ಹೇಗಿದೇಂತ ಸ್ವಲ್ಪ ವಿವರವಾಗಿ ಹೇಳ್ತೀಯಾಂತನ್ನೋ ಪ್ರಶ್ನೆ.''

ಅದೇನು ಕೊಳೆತ ಮೊಟ್ಟೆಯ ಸ್ಮೆಲ್ಲೋ ಅಥವಾ ಅದರ ಜೊತೆ ಕೊಳೆತ ಬೆಳ್ಳುಳ್ಳೀನೂ ಸೇರಿರೋದೋ? ಆದ್ರೆ ಈ ಘಾಟೂ, ರಬ್ಬರ್ ಸುಟ್ಟ ವಾಸನೆ? ಉಲ್ಬಣಿಸುತ್ತಿದ್ದ ಅಸಾಧ್ಯ ನರಕಯಾತನೆಯಂತಿದ್ದ ಅದು ಒಂದಲ್ಲ, ಒಂದಿಪ್ಪತ್ತೆಂಟು ಗಬ್ಬುನಾತಗಳ ಘೋರ ಸಮ್ಮಿಶ್ರಣ! ಅದನ್ಹೇಗೆ ತಾನೇ ಫೋನಲ್ಲಿ ವಿವರಿಸಿ ಹೇಳಕ್ಕೆ ಸಾಧ್ಯ!



‘‘ಈ ವಿಸಿಟ್ನಲ್ಲಿ ಇದೊಂದು ಬಾಕಿ ಇತ್ತು ಪಾಪ ನಿಂಗೆ. ಹೋಗ್ಲಿ, ಸ್ಟಿಂಕ್ ವಾಸನೆ ಅಂದ್ರೇನು ಹೇಳೂಂತ ಅವತ್ತು ಬೆಂಗಳೂರಲ್ಲಿ ಮಧ್ಯಾಹ್ನ ಮದ್ವೆಮನೆ ಊಟ ಹೊಡ್ಕೊಂಡು ಬಂದು ಹಾಯಾಗಿ ಬೀಡಾ ಅಗೀತಾ ಕೇಳ್ತಿದ್ಯಲ್ಲ, ಈಗ್ಲಾದ್ರೂ ಗೊತ್ತಾಯ್ತಾ?’’ – ಆ ಕಡೆಯಿಂದ ಅಶರೀರವಾಣಿ.

‘‘ಸರೀ ತಪ್ಪಾಯ್ತಪ್ಪಾ. ಇನ್ನೊಂದು ದಿನ ಮದ್ವೆ ಮನೆ ಊಟದ ಸ್ವೀಟ್ ಪಾನ್ ಜಗೀತಾ ಫೋನಲ್ಲಿ ಮಾತಾಡಲ್ಲ. ಆದ್ರೆ ಸದ್ಯಕ್ಕೆ ಈ ಘೋರದಿಂದ ಪಾರಾಗಲು ಏನಾದರೂ ಉಪಾಯ ಇದ್ದರೆ ಹೇಳು ಮಹರಾಯಾ. ಏನಾದ್ರೂ ಇದ್ಯೋ ಅಥವಾ?..’’ – ಅಂತಂದೆ.

‘‘ಅಷ್ಟೊಂದು ಪೆಸಿಮಿಸಂ ಏನ್ಬೇಡ ಅಮ್ಮಾ. ಖಂಡಿತಾ ಒಂದು ಸುಲಭೋಪಾಯ ಇದೆ. ಹೇಳ್ತೀನಿ ತಡೀ, ಆದ್ರೆ ಮುಂಚೆ ಬದ್ರೀನ್ ಕರ್ಕೊಂಡ್ ಹೋಗಿ ಕೆಳಗಿನ ಬಾತ್ ಟಬ್ಬಲ್ಲಿ ಬಿಟ್ಟು ಕೂಡ್ಹಾಕ್ಬಂದು ಮತ್ತೆ ಫೋನ್ ಮಾಡು. ಮಾತ್ರ ಎಲ್ಲಾದ್ರೂ ಅದನ್ನ ಅಯ್ಯೋ ಪಾಪ ಒದ್ದಾಡ್ತಿದೆಯಲ್ಲಾಂತ – ಮನೆ ಒಳಗೆಲ್ಲಾ ಕಡೆ ಫ್ರೀಯಾಗಿ ಓಡಾಡಕ್ಕೆ ಬಿಟ್ಬಿಟ್ಟೀರಿ, ಹುಷಾರು! ಕಾರ್ಪೆಟ್ಟಿಗೇನಾದ್ರೂ ವಾಸನೆ ಹತ್ತಿಗಿತ್ತಿಕೊಂಡ್ರೆ ಆಮೇಲೆ ಬಡಪೆಟ್ಗೆ ಹೋಗಲ್ಲ. ಈಗ ವರಿ ಮಾಡ್ಕೋಬೇಡಾ, ಅದಕ್ಕೇನೂ ಆಗಿಲ್ಲ. ಒಂದ್ಸಲ ಎಕ್ಸ್ಪೀರಿಎನ್ಸ್ ಆದ್ರೂ ಪೆದ್ದುಪೆದ್ದಾಗಿ ಎಲ್ಲೋ ಯಾವ್ದೋ ಸ್ಕಂಕ್–ನ್ನ ಅಟ್ಟಿಸ್ಕೊಂಡ್ಹೋಗಿ ಮತ್ತೆ ಅದರ ಕೈಲಿ ಮಾಡಿಸ್ಕೋಡು ಬಂದಿರ್ಬೇಕಷ್ಟೇ’’ – ಅಂತಂದಿತು ವಂಶದ ಕುಡಿಯ ಧ್ವನಿ.

ಆದ್ರೂ ನಂಗ್ಯಾಕೋ ಅನುಮಾನವೇ, ಈ ಅಸಾಧ್ಯ ನಾತವಿಲ್ಲದ ಬೇರೆ ಜಗತ್ತು ಉಂಟೇ, ಅದರಲ್ಲಿ ನಾನು ನನ್ನ ಉಳಿದ ಆಯಸ್ಸು ಕಳೆಯಲು ಸಾಧ್ಯವೇಂತ!!

ನಲವತ್ತೈದು ವರ್ಷದ ಕೆಳಗೆ ನಮ್ಮ ಕ್ಲಾಸಿಗೆ ಇಂಗ್ಲೀಷ್ ಗ್ರಾಮರ್ ಹೇಳ್ಕೊಡ್ತಿದ್ದ ಸಿಸ್ಟರ್ ಫರ್ಮಿನಾ, ನಮಗೆ ಉರು ಹೊಡೆಸುತ್ತಿದ್ದ – "as fresh as a Daisy", "as stubborn as a Mule", "as poor as a Church Mouse" ಮುಂತಾದ ಸಿಮಿಲಿಗಳ ಜೊತೆ ತಪ್ಪದೆ ಇರ್ತಿದ್ದ ಇನ್ನೊಂದೂಂದ್ರೆ – "as stinking as a Skunk"! ಇಂಟರ್ನೆಟ್ಟಿನ ವಿಕಿಪೀಡಿಯಾ ಇಲ್ಲದ ಆ ಕಾಲದಲ್ಲಿ ಅರ್ಥ ಮಾಡಿಕೊಳ್ಳದೆ ಉರು ಹೊಡೀಬಾರ್ದೂಂತ ಹಠ ಸಾಧಿಸ್ತಿದ್ದ ನಾವು ಒಂದಿಷ್ಟು ಅಧಿಕಪ್ರಸಂಗಿಗಳಿಗೆ – ಚರ್ಚ್ ಮೌಸು, ಮ್ಯೂಲುಗಳು ಸತಾಯಿಸ್ದೇದ್ರೂ ಆ ಸ್ಕಂಕಿನ ಕೊಳಕು ಮತ್ತು ನಮ್ಮ ಮಾಮೂಲೀ ಹೂವುಗಳಲ್ಲಿಲ್ಲದ ಫ್ರೆಶ್ನೆಸ್ಸು ಆ ವಿದೇಶದ ಡೈಸೀಲಿ ಹೇಗಿರಬಹುದೂಂತ – ಯೋಚ್ಸೀ ಸಾಕಾಗಿತ್ತು. ಕೊನೆಗೆ ಚಿಂತಿಸಿ ಹಣ್ಣಾದ ನಾವು ಮೈಸೂರು Zoo ಲಿ ಸ್ಕಂಕನ್ನ ಹುಡುಕಿದ್ದೂ ಉಂಟು. ಅದ್ನೆಲ್ಲಾ ಜ್ಞಾಪಿಸಿಕೊಳ್ತಾ ಈ ಕಡೆ ಇವನು ಹೇಳಿದ ಸಾಮಾನು ಸರಂಜಾಮನ್ನೆಲ್ಲಾ ಹೊಂಚಿಕೊಳ್ಳೋ ಹೊತ್ಗೆ ಹನ್ನೊಂದೂವರೆ. ಇಂಥಾ ಸಮಯಕ್ಕೆ ಕೈಗಾವಲಾಗಿರ್ಲೀಂತಾನೇ ಜೋಪಾನವಾಗಿಟ್ಟಿದ್ದ

ಹೋದಸಲ ಉಳಿದಿದ್ದ ಹೈಡ್ರೋಜನ್ ಪರಾಕ್ಸೈಡು, ಬೇಕಿಂಗ್ ಸೋಡಾ, ಓಟ್ ಮೀಲ್ ಶ್ಯಾಂಪೂ ಇತ್ಯಾದಿ ಸರಂಜಾಮುಗಳನ್ನ, ಅದಕ್ಕಾಗೇ ಇಟ್ಟಿದ್ದ ಬಕೆಟ್ನಲ್ಲಿ ಬೆರೆಸಿ, ಬಡಪಾಯಿ ಬದ್ರೀ ತಲೆಗೆ, ಮೈಗೆ ಆ ಲೇಪನವನ್ನು ಹಚ್ಚಿ ಒಂದರ್ಧ ಘಂಟೆ ಆದ್ಮೇಲೆ ನಮ್ಮ ನಿಂಗಮ್ಮ ಬಾಂಡ್ಲೆ ತಿಕ್ಕೋ ಹಾಗೆ, ಚೆನ್ನಾಗಿ ತಿಕ್ಕೀತಿಕ್ಕಿ ಸ್ನಾನ ಮಾಡಿಸಿದ್ದೂ ಆಯ್ತು. ಪಾಪ ಅದಂತೂ ಅದಿನ್ನೆಷ್ಟು ಚೆನ್ನಾಗಿ ಕಂಕಿಂ ಅನ್ನದೆ ಎಲ್ಲಾನ್ನೂ ಮಾಡಿಸ್ಕೊಂಡ್ತೂಂತ! ಗಬ್ಬುನಾತದಿಂದ ಎಷ್ಟು ಹಿಂಸೆಯಾಗ್ತಿತ್ತೋ ಏನೋ!

ನಾಯಿ, ಬೆಕ್ಕು ಇತ್ಯಾದಿ ಸಾಕುಪ್ರಾಣಿಗಳ ತೊಗಲಿಗೆ ತೊಂದರೆಯಾಗದಂತೆ ಸೌಮ್ಯವಾದ ಒಂದು ರಾಸಾಯನಿಕ ಕ್ರಿಯೆಯಿಂದ ಆ ಅಸಾಧ್ಯವಾದ ವಾಸನೆ ತೊಲಗಿಸಕ್ಕೆ ಕಂಡುಕೊಂಡಿರೋ ಆ ಉಪಾಯ ನಿಜವಾಗಲೂ ಚೆನ್ನಾಗೇ ಕೆಲಸಮಾಡಿತು, ನಮ್ಮ ಪುಣ್ಯ! ಇಷ್ಟೆಲ್ಲಾ ಆದ್ಮೇಲೆ, ಆ ಅಪರಾತ್ರೀಲಿ ನಮ್ಮಗಳ ಸಚೇಲ ಸ್ನಾನ, ವಾಶಿಂಗ್ ಮಶಿನ್ನೊಳಗೆ ಬಟ್ಟೆಗಳನ್ನ ಲೋಡ್ ಮಾಡೋದು ಇತ್ಯಾದಿ ಎಲ್ಲಾ ಮುಗಿದು ಅವತ್ತು ಹಾಸಿಗೆ ಮುಖ ಕಂಡಾಗ ಎಷ್ಟೊತ್ತಾಗಿರ್ಬೇಕೂಂತ...... ಉಹು ನಾನ್ ಹೇಳಲ್ಲ, ನೀವೇ ಊಹಿಸಿ!

ಆದ್ರೆ, ಮಹಡಿ ಮೇಲೆ ರೂಮಿಗೆ ಹೋಗಿ ಮಲಗಿಕೊಂಡ್ರೂ ಆ ದರಿದ್ರ ನಾತ ನನ್ನ ಬಿಡಬೇಕಲ್ಲ. ಈ ಕಡೆ ನಿದ್ದೇನೂ ನಾತಕ್ಕೆ ಹೆದರಿ ಪರಾರಿ! ಹಾಸಿಗೆ, ದಿಂಬು, ಹೊದ್ದಿಕೆ – ಎಲ್ಲೆಲ್ಲೂ ಅದರದ್ದೇ ಸರ್ವಾಂತರ್ಯಾಮಿತ್ವ! ಎದ್ದು ಹಾಸಿಗೆ ಬಟ್ಟೆಗಳಿಗೇ ಧಾರಳವಾಗಿ ಪರ್ಫ್ಯೂಂ ಚುಮುಕಿಸಿದೆ. ಊಹೂ, ಜಗ್ಗಲಿಲ್ಲ, ಕೊನೆಗೆ ಹೊಳೀತು – ಆ ಹಾಳಾದ್ದ ವಾಸ್ನೆ ನನ್ನ ಮೂಗಿನೊಳಗೇ, ಅಥವಾ ಮೀರಿ ನನ್ನ ಮಿದುಳಿನೊಳಗೇ ಸೇರ್ಕೊಂಡುಬಿಟ್ಟಿರಬೇಕೂಂತ! ಎದ್ದು ಕೂತ್ಕೊಂಡು ಇತ್ಯರ್ಥ ಮಾಡಿದೆ – ಸ್ಕಂಕಿನ ಈ ವೈಚಿತ್ರವನ್ನು ಅರ್ಥಾತ್ ಅದರ ಈ ವಿಚಿತ್ರ ಸ್ಪ್ರೇಯ ಈ ಗಬ್ಬುನಾತಾನ್ನ – ಹೇಗಾದರೂ ಮಾಡಿ ನಿಮ್ಮಗಳಿಗೆ 'ದಾಟಿಸಿ' ಬಿಡೋಣಾಂತ...

ಇಲ್ಲಿ ನಾನು ಕೇಳಿದ ಹಾಗೆ, ಈ ಸ್ಕಂಕ್, ಉತ್ತರ ಅಮೆರಿಕಾ ಖಂಡದ ಬೇಸಿಗೆಯಲ್ಲಿ ಕಾಣಿಸಿಗುವ ಸಾಧಾರಣವಾಗಿ ಅಚ್ಚಕಪ್ಪು ಬಣ್ಣ ಹೊಂದಿರುವ ವಿಶಿಷ್ಟ ಪ್ರಾಣಿ. ಬೆಕ್ಕಿನ ಜಾತಿಗೆ ಸೇರಿದ ಆದರೆ ಗಾತ್ರದಲ್ಲಿ ಅದಕ್ಕಿಂತಲೂ ದೊಡ್ಡದಾದ, ಸೌಮ್ಯವಾದ ನಿರುಪದ್ರವಿ. ಮೂಗಿನ ತುದಿಯಿಂದ ಒಂದು ಸಣ್ಣಬಿಳಿ ನಾಮದಂತೆ ಪ್ರಾರಂಭವಾಗಿ ಬಾಲದ ತುದಿಯವರೆಗೂ ಮುಂದುವರೆದ ಅಗಲ ಬಿಳಿ ಪಟ್ಟೆಗಳುಳ್ಳ, ಬಾವುಟದಂತೆ ಸದಾ ಬಾಲವನ್ನೆತ್ತಿಕೊಂಡೇ ಇರುವ ಈ ಸಾಧುಜೀವಿಗೆ ಪ್ರಕೃತಿಯಿತ್ತಿರುವ ವರ ಅದರ ಅತ್ಯಂತ ಕೊಳಕು ವಾಸನೆಯುಳ್ಳ ಸ್ಪ್ರೇ. ಬಾಲದ ಕೆಳಗೆ ಎರಡೂ ಪಕ್ಕದಲ್ಲಿರುವ ಎರಡು ಗ್ರಂಥಿಗಳು ಪಿಚಕಾರಿಯಂತೆ ಚಿಮ್ಮಿಸಬಲ್ಲ ಈ ಸ್ಪ್ರೇಯನ್ನು ಸ್ರವಿಸಿ ಉತ್ಪತ್ತಿ ಮಾಡಿ, ಯಾವಾಗಲೂ ಸಿದ್ಧವಾಗಿರಿಸಿಟ್ಟಿರುವುದು ಸ್ಕಂಕಿನ ವೈಶಿಷ್ಟ್ಯ. ಹತ್ತಡಿಯವರೆಗೂ ಸಿಡಿಯಬಲ್ಲ ಈ ಜಿಡ್ಡುಜಿಡ್ಡಾದ ಸ್ಪ್ರೇಯನ್ನು ವೈರಿಯ ಮೇಲೆ ಯಶ್ವಸಿಯಾಗಿ ಚಿಮ್ಮಿಸಲು ಅದಕ್ಕೆ ವೈರಿಯ ಆಕ್ರಮಣಕಾರಿ ನಡವಳಿಕೆಗಳು ಉತ್ತೇಜನಕಾರಿ! ಇನ್ನು ಅದರ ನಾತದ ಬಗ್ಗೆ ಹೇಳದಿದ್ದರೆ ನಿಮಗೆ ಅದರ ತೀಕ್ಷ್ಣತೆಯ ಅಂದಾಜಾಗೋದಾದ್ರೂ ಹೇಗೆ ಅಂದ್ರಾ? ಸರಿ, ಹಾಗಾದ್ರೆ ಕೇಳಿ:

ಒಂದು ಹಾಟ್ ವಾಟರ್ ಬ್ಯಾಗಿನೊಳಗೆ ಒಂದಿಷ್ಟು – ಮೂಲಂಗಿ, ಕೋಸ್ಗೆಡ್ಡೆ ಅಥ್ವಾ ನವಿಲ್ಕೋಸು, ಈರುಳ್ಳಿ ಮತ್ತು ಬೆಳ್ಳುಳ್ಳಿ ಚೂರುಗಳು, ಹಸಿ ಸಾಸ್ವೆ ಕಾಳಿನ ಪುಡಿ, ಖಾರದ ಪುಡಿ, ಒಂದು ಚೂರು ಇಂಗನ್ನು ತುರುಕಿ, ಆಮೇಲೆ ತಲಾ ಒಂದೊಂದು ಕಪ್ಪಿನಷ್ಟು ವಿನೆಗರ್ರು, ಡೀಸೆಲ್ಲು, ಡೈಲ್ಯೂಟ್ ಸಲ್ಫ್ಯೂರಿಕ್ ಆಸಿಡ್ಡು ಮತ್ತು ಒಂದೆರಡು ಕೊಳೆತ ಮೊಟ್ಟೆಗಳ ಲೋಳೆ – ಇವೆಲ್ಲವನ್ನೂ ಅದರ ಮೇಲೆ ಸುರಿದು, ನಂತರ ಬ್ಯಾಗನ್ನು ಉರಿಯುತ್ತಿರುವ ಬೆಂಕಿಯೊಳಗೆ ಹಾಕಿದ್ರೀಂತ ಇಟ್ಕೊಳ್ಳಿ. ಅದು ಚೆನ್ನಾಗಿ ಹತ್ತಿಕೊಂಡು ಉರಿದರೆ ಅದರಿಂದ ಯಾವ ರೀತಿಯ ವಾಸನೆ ಬರಬಹುದೂಂತ ನಿಮಗೆ ಊಹಿಸಲು ಸಾಧ್ಯವಾದರೆ, ಸ್ಕಂಕಿನ ಸ್ಪ್ರೇ–ಯ ಗಬ್ಬುನಾತದ ನೂರಲ್ಲೊಂದು ಭಾಗದಷ್ಟನ್ನು ಕಲ್ಪಿಸಿಕೊಳ್ಳಲು ನಿಮಗಾಯಿತು ಎಂದರ್ಥ!

ಸೃಷ್ಟಿಯ ಬೆರಗೊಂದನ್ನ ನನ್ನ ಪರಿಮಿತಿಯಲ್ಲಿ ಕಿಂಚಿತ್ ಬಣ್ಣಿಸಕ್ಕಾದ ತೃಪ್ತೀಗೋ ಏನೋ ಆಮೇಲೆ, ಅಂತೂ ಕೊನೆಗೆ ಕಣ್ಣೆಳೆಯಕ್ಕೆ ಶುರುವಾಯಿತೂನ್ನಿ...

✵

---

## ಡೈವೋರ್ಸ್ ಕೇಸ್

ಡೈವೋರ್ಸ್ ಕೇಸ್ ವಿಚಾರಣೆಗೆ ಬಂದಿತ್ತು.

ನ್ಯಾಯಾಧೀಶರು ಮಹಿಳೆಯನ್ನು ಕೇಳಿದರು, "ಯಾತಕ್ಕಾಗಿ ನೀವು ವಿಚ್ಛೇದನೆ ಬಯಸುತ್ತೀರಿ?"

ಮಹಿಳೆ: "ಒಂದು ದೊಡ್ಡ ಬಂಗಲೆ, ಮುಂದೆ ತೋಟ, ಆಳು ಕಾಳು.."

"ಅದಲ್ಲಾ ನಾನು ಕೇಳಿದ್ದು, ಈ ಕೇಸಿನ ಫೌಂಡೇಷನ್?"

"ಸಿಮೆಂಟ್, ಕಾಂಕ್ರೀಟಿನಿಂದ ಮಾಡಿದ್ದು.."

"ಏನು ಸಂಬಂಧ?"

"ನನಗೆ ಚಿಕ್ಕಪ್ಪ, ಚಿಕ್ಕಮ್ಮ, ಸೋದರ ಮಾವ, ಅತ್ತೆ ಮಾವ.."

"ನಿಮಗೆ ಏನಾದರೂ ತೊಂದರೆ..?"

"ಏನಿಲ್ಲ. ನಮಗೆ ಎರಡು ಕಾರಿದೆ. ಇನ್ನೊಂದು ಬೇಕಿಲ್ಲ."

"ನಿಮ್ಮಿಬ್ಬರ ಸಂಬಂಧದಲ್ಲಿ ಏನಾದರೂ ಅಪನಂಬಿಕೆ...?"

"ನಮ್ಮ ಇಬ್ಬರ ಮಕ್ಕಳ ಬಳಿ ಸ್ಟಿರಿಯೋ ಮ್ಯೂಸಿಕ್ ಸೆಟ್‌ಗಳಿವೆ. ಆದರೆ ನಮಗೆ ಮ್ಯೂಸಿಕ್ ಅಂದರೆ ಅಷ್ಟಕ್ಕಷ್ಟೆ.."

"ನಿಮ್ಮ ಗಂಡ ನಿಮ್ಮನ್ನು ಯಾವತ್ತಾದರೂ ನಿಮ್ಮನ್ನು ಹೊಡೆದಿರುವರೆ?"

"ಹೌದು.. ವಾರಕ್ಕೆರಡು ಸಲ ಅವರೇ ಬೇಗ ಏಳುತ್ತಾರೆ..."

"ಹೋಗಲಿ ತಾಯಿ. ನಿಮಗೆ ಈ ಡೈವೋರ್ಸ್ ಆದರೂ ಯಾಕೆ ಬೇಕು ಹೇಳಿ ಹೋಗಲಿ."

"ಡೈವೋರ್ಸ್? ನನಗೆ ಖಂಡಿತ ಬೇಡ. ನನ್ನ ಗಂಡನಿಗೆ ಬೇಕಂತೆ. ನನ್ನ ಜತೇಲಿ ಮಾತನಾಡೋದಿಕ್ಕೆ ಸಾಧ್ಯವೇ ಇಲ್ಲ ಅಂತ ಹೇಳ್ತಿರ್ತಾರೆ ಅವರು."

– ಧೃತರಾಷ್ಟ್ರ

# ನವೆಂಬರ್ 2011

**- ಜ್ಯೋತಿಷಿ ಸತ್ಯೋತ್ತಮಾಚಾರ್ಯ**

**ಮಾಸ ಸೂಕ್ತಿ:** 'ಗೃಹಬಲ'ವೆನ್ನುವುದು ಎಲ್ಲರಿಗೂ ಇದೆ ನಿಜ. ಆದರೆ ಇದಕ್ಕೆ ವ್ಯತಿರಿಕ್ತವಾಗಿ ಎಲ್ಲರಿಗೂ ಯಾವುದಾದರೂ 'ಬಲಹೀನತೆ' ಅಥವಾ 'ಕುಂದು ಕೊರತೆ'ಗಳೂ ಇವೆ! ನಿಮ್ಮ ನಿಮ್ಮ ರಾಶಿಯಲ್ಲಿ ಕುಂದು ಕೊರತೆಗಳೇನು ಅಂತ ತಿಳ್ಕೊಂಡು ಹುಷಾರಾಗಿರಿ!

**ಮೇಷ :** ತೀರಾ ಸ್ವಾರ್ಥಿಗಳಪ್ಪ ನೀವು. ಕೋಪಿಷ್ಟರೂ ಕೂಡ. ಅಸಹನೆ ಅನ್ನೋದು ನಿಮ್ಮನ್ನ ಎಂದೂ ಕಾಡುತ್ತೆ! ಏನು ಮಾಡಿದ್ರೂ ದಿಢೀರ್ ಅಂತ ಮಾಡೋಕ್ಕೆ ಹೋಗಿ ಹಳ್ಳಕ್ಕೆ ಬೀಳ್ತೀರಾ. ಬೆಂಗಳೂರಿನಂತಹ ಊರಿನಲ್ಲಿ ದ್ವಿಚಕ್ರವಾಹನಗಾರರಲ್ಲಿ ನಿಮ್ಮಂತಹವರ ಮೆಜಾರಿಟಿ ನೋಡಬಹುದು.

**ವೃಷಭ :** ಸ್ವಲ್ಪ ಮೊಂಡು ಜಾತಿಗೆ ನೀವು ಸೇರಿದ್ದೀರಿ. ಆದರಿಂದಾಗಿ ಚಿಕ್ಕ ವಯಸ್ಸಿನಲ್ಲಿ ಅಪ್ಪ ಅಮ್ಮನಿಂದ, ದೊಡ್ಡ ವಯಸ್ಸಿನಲ್ಲಿ ಗಂಡ-ಹೆಂಡತಿಯಿಂದ ಏಟು ತಿನ್ನೋದು ನಿಮ್ಮ ಹಣೇ ಬರಹದಲ್ಲಿದೆ. 'ಬದಲಾವಣೆ' ಅಂದರೆ ನಿಮಗೆ ಅಲರ್ಜಿ. ಎಲ್ಲಾ ಇದ್ದ ಹಾಗೇ ಇರಬೇಕು. ಮಾಡಿದ್ದೇ ಮಾಡ್ಬೇಕು. ಇಲ್ಲದಿದ್ದರೆ ಕೋಪ ಉಕ್ಕುತ್ತೆ. ದೇವರೇ ನಿಮ್ಮನ್ನು ರಕ್ಷಿಸಬೇಕು.




**ಮಿಥುನ :** ಯಾವಾಗಲೂ ನೀವು ಒಂಟಿ ಕಾಲುಮೇಲೆ ನಿಂತಿರ್ತೀರಾ. ಯಾವಾಗ ನೋಡಲಿ ನಿಮಗೆ ಕನ್‌ಫ್ಯೂಷನ್‌ನೇ! ಯಾವ ಕಾರ್ಯಕ್ಕೂ ಸಮಯಕ್ಕೆ ಸರಿಯಾಗಿ ಇರೋದಿಲ್ಲ! ಇಷ್ಟ ದಿನಗಳ ತನಕ ನೀವು ಲೈಫ್‌ನಲ್ಲಿ ಅದು ಹೇಗೆ ಸವರಿಸಿಕೊಂಡು ಬಂದಿದ್ದೀರಿ ಅಂತ ನನಗೇ ಆಶ್ಚರ್ಯವಾಗುತ್ತೆ. ಮಿಥುನರವರೇ ಮದುವೆಯಾದಲ್ಲಿ ಅವರ ರಿಸೆಪ್ಷನ್‌ಗೆ ಹೋದರೆ, ಸಂಜೆ ಇಬ್ಬರೂ ಸೋಫಾ ಮೇಲೆ ಪವಡಿಸೋಕೆ ಒಂಭತ್ತು ಗಂಟೆ ಆದರೂ ಆಗುತ್ತೆ.

**ಕಟಕ :** ಅಯ್ಯೋ, ಅಯ್ಯೋ, ಬಹಳ 'ಮೂಡಿ' ಜನಾಂಗಕ್ಕೆ ಸೇರಿದೀರಪ್ಪ ನೀವೆಲ್ಲಾ. ನೀವೇನು ದುಃಖದಲ್ಲಿದ್ದೀರೋ, ಖುಷೀಲಿದ್ದೀರೋ ಅಂತ ಯಾರಿಗೂ ಗೊತ್ತಾಗಲ್ಲ. ನೀವೇನಾದರೂ ಒಂದು ಕಲ್ಲಿನ ಪ್ರತಿಮೆ ಪಕ್ಕ ನಿಂತುಕೊಂಡ್ರೆ, ನೀವು ಕಲ್ಲೋ, ಕಲ್ಲು ನೀವೋ ಅಂತ ಹೇಳೋಕ್ಕೆ ಸ್ವಲ್ಪ ಕಷ್ಟವೇ. ಭಾರತದ ಪ್ರಧಾನ ಮಂತ್ರಿ ಪಟ್ಟಕ್ಕೆ ನಿಮ್ಮಂತಹವರು ಹೇಳಿ ಮಾಡಿಸಿದ ಹಾಗೆ ಹೊಂದ್ಕೋತಾರೆ.

**ಸಿಂಹ :** ನಿಮಗಿರೋ ಜಂಬ ನಿಜವಾದ 'ಸಿಂಹ'ಕ್ಕೂ ಇರಲ್ಲ. ಜೊತೆಗೆ ನಿಮಗೆ ಸ್ವಪ್ರಶಂಸೆಯ ಗೀಳು ಬೇರೆ! ಒಂದು ಸ್ವಲ್ಪ ನಿಮ್ಮನ್ನ ನೀವೇ ಕಂಟ್ರೋಲ್‌ನಲ್ಲಿ ಇಟ್ಟುಕೊಂಡಿರಿ. ನೀವಿಲ್ಲದೇನೇ ಈ ಪ್ರಪಂಚ ಸುತ್ತುತ್ತಾ ಇದೆ; ಜನರೂ ಬಾಳ್ತಾ ಇದ್ದಾರೆ. ಕನ್ನಡೀಲಿ ನೋಡ್ಕೊಂಡು ನಿಮ್ಮನ್ನ ನೀವೇ ಹೊಗಳಿಕೊಳ್ಳೋ ಜಾತಿ ನೀವು. ಯಾರೂ ಏನೂ ಮಾಡೋಕ್ಕೆ ಆಗಲ್ಲ ಬಿಡಿ.

**ಕನ್ಯಾ :** ಎಲ್ಲರನ್ನೂ ನಿಂದಿಸೋದು ನಿಮ್ಮ ದೊಡ್ಡಗುಣ! ಇಸ್ತ್ರಿ ಸರೀಗಿಲ್ಲ, ಗಂಟಲು ಸರೀಗಿಲ್ಲ, ಟೀಚರ್ ಸರೀಗಿಲ್ಲ, ಉಪ್ಪು ಜಾಸ್ತಿ, ಖಾರ ಕಮ್ಮಿ, ಸೀರೆ ಸೆರಗು-ಪಂಚೆ ಅಂಚು ಸರೀಗಿಲ್ಲ, ಸೊಸೆ ಸರೀಗಿಲ್ಲ, ಅಳಿಯ ಸರೀಗಿಲ್ಲ, ಕರೆಂಟಿದ್ರೆ ನೀರಿಲ್ಲ-ನೀರಿದ್ರೆ ಕರೆಂಟಿಲ್ಲ, ನೀರೂ-ಕರೆಂಟೂ ಎರಡೂ ಇದ್ರೆ ಕೆಲಸದವರು ಇಲ್ಲಾ-ಹೀಗೆ ಇಲ್ಲಾ-ಇಲ್ಲಾ ಜಪದಲ್ಲೇ ಜೀವನ ಸಾಗಿಸ್ತೀರಿ.

**ತುಲಾ :** ನಿಮಗೆ ಯಾವ ವಿಷಯದಲ್ಲೂ ಒಂದೇ ಬಾರಿ ನಿಶ್ಚಯ ಮಾಡೋಕ್ಕೆ ಬರೋಲ್ಲ. ಅದು ಬೇಕೋ, ಇದು ಬೇಕೋ, ಅದು ತೊಗಳಲೋ, ಇದು ತೊಗಳಲೋ, ಅದು ಬಿಡಲೋ ಇದು

ಬಿಡಲೋ – ಹೀಗೆ ವಾಲಾಡಿಕೊಂಡು ಜೀವನ ಕಳೀತೀರ. ನೀವೇನಾದರೂ ಯಾವುದಾದರೂ ರೆಸ್ಟೋರೆಂಟ್‌ಗೆ ಹೋಗಿ 'ಮೆನು' ಕಾರ್ಡ್ ಹಿಡ್ಕೊಂಡ್ರೆ ಮುಗೀತು ಕತೆ! ಜಾಗ ಕ್ಲೋಸ್ ಆಗೋತನಕ ಎಲ್ಲರಿಗೂ ಉಪವಾಸಾನೇ! ನಿಮ್ಮನೆ ಸುತ್ತಲೂ ಯಾವುದಾದರೂ ಅಡ್ಡ ಗೋಡೆ ಇದ್ದರೆ ಅದರ ಮೇಲೊಂದು ದೀಪ ಹಚ್ಚೋ ಟೈಪು ನೀವು.

**ವೃಶ್ಚಿಕ :** ಹೊಟ್ಟೆಕಿಚ್ಚು ಇರೋ ಜಾತಿ ನೀವು; ಪಕ್ಕದ ಮನೆಯವರ ಹೆಂಡತಿ ನನಗಿಂತ ಬೆಳ್ಳಗಿದ್ದಾಳೆ; ಎದುರುಮನೆಯಾತನಿಗೆ ಇನ್ನೂ ಬಿಳೀ ಕೂದಲೇ ಇಲ್ಲ; ಕೊನೆ ಮನೆ ಹುಡುಗಿ ಟೀವಿ ಶೋನಲ್ಲಿ ಬರೋ ಅಷ್ಟು ರಂಭೇನಾ? ಇವಳ್ಯಾಕೆ ಸ್ವೀಟ್ಸ್ ತಿಂದರೂ ನನಗಿಂತ ಸಣ್ಣಗಿದ್ದಾಳೆ? ಅವನು ನ್ಯೂಜರ್ಸಿಗೆ ಹೋದರೆ ನಾನು ನ್ಯೂಯಾರ್ಕ್‌ಗೆ ಹೋಗ್ತೀನಿ – ಇಂತಹ ಯೋಚನೆಗಳಲ್ಲೇ ಮುಳುಗಿರೋ ಕರ್ಮ ನಿಮ್ಮದು.

**ಧನಸ್ಸು :** ಕನ್ನಡೀಲಿ ನಿಮ್ಮ ನಾಲಿಗೆ ಚಾಚಿಕೊಂಡು ಒಂದು ಸಲ ನೋಡ್ಕೊಳ್ಳಿ. ಸ್ವಲ್ಪ 'ವಾಚಾಳಿತನ' ಇರೋ ನಾಲಿಗೆ ಅದು. ನಿಮ್ಮ ಬೈಗಳದ ಮುಂದೆ ಯಾರಿಗೂ ಎದುರಿಸೋಕ್ಕೆ ಧೈರ್ಯವೇ ಇರೋಲ್ಲ. ಹಾಗಾಗಿ ನೀವೇನಾದ್ರೂ ಗಂಡನ ಸಾಕಿಕೊಂಡಿರೋ ಹೆಂಗಸಾದರೆ, ನಿಮ್ಮ ಗಂಡ–ಮನೆ ಬೆಕ್ಕು–ಎರಡೂ ಬಾಲ ಮುದುರಿಕೊಂಡು ಕೂತಿರ್ತಾರೆ. ದಾರೀಲಿ ನೀವು ನಡೀತಿದ್ರೆ (ನಿಮ್ಮ ರಾಶಿಯವರನ್ನ ಬಿಟ್ಟು) ನಿಮ್ಮ ಮುಖ ಕಂಡ ತಕ್ಷಣ ಎಲ್ಲರೂ ಅಕ್ಕ ಪಕ್ಕದ ಓಣಿಗೆ ಡೈವ್ ಹೊಡೆದು ತಲೆ ಮರೆಸಿಕೊಳ್ತಾರೆ.

**ಮಕರ :** ಕೋಪ! ಕೋಪ!! ಕೋಪ!!! ಬರೀ ಮೂಗಿನ ತುದೀಲಿ ಮಾತ್ರವಲ್ಲ, ಬಾಯಿ, ಕಿವಿ, ಕೈಯಿ, ಕಾಲು ತುದಿಗಳಲ್ಲೂ ಕೋಪಾನೇ ಮಿಂಚಿಸ್ತಿರ್ತೀರಾ. ನಿಮ್ಮಂತಹವರ ಮನೆಗಳಲ್ಲಿ ಸಾಧಾರಣವಾಗಿ ಪಿಂಗಾಣಿ ಸಾಮಾನುಗಳು ಕಾಣಲ್ಲ(ಎಲ್ಲಾ ಕೋಪದಲ್ಲಿ ಒಡೆದು ಹಾಕಿರ್ತೀರಾ). ನಿಮ್ಮ ಇನ್ನೊಂದು ಕೆಟ್ಟ ಗುಣ ಅಂದರೆ ನಿಮ್ಮ ಕೋಪಾನ ಇನ್ಯಾರಮೇಲೋ ತಿರೀಸ್ಕೊಳ್ಳೋದು. ಅದಕ್ಕೆ ನಿಮ್ಮ ಮನೆ ಗೇಟ್ ಹತ್ತಿರ ಪೇಪರಿನವರು, ಹಾಲಿನವರು, ಕೆಲಸದವರು ಸುಳಿಯೋದಿಲ್ಲ.

**ಕುಂಭ :** ನೀವು ''ಪಾರ್ಕಲಾಂ'' ಜಾತಿಗೆ ಸೇರಿದವರು. ಏನು ಕೇಳಿದರೂ 'ನೋಡೋಣ, ನೋಡೋಣ' ಅಂತ ವಿಷಯಾನ ತೇಲಿಸೋದಲ್ಲಿ ಸಮರ್ಥರು. ನಿಮ್ಮಂತಹವರು ಸರ್ಕಾರಿ ಇಲಾಖೆಗಳಿಗೆ ಹೇಳಿ ಮಾಡಿಸಿದಂತಹವರು. ಇಂತಹ ದೋಶ ನಿವಾರಣೆಗೆ ಕುಂಭದವರಿಗೆ ನಾನು ಯಾವುದಾದರೂ ಹೋಮ, ಪೂಜೆ, ಪುನಸ್ಕಾರ ಮಾಡಿಸಿಕೊಳ್ಳಿ ಅಂತ ಬುದ್ದಿ ಹೇಳಿದೀನಿ. ಆದರೆ ಅವರೆಲ್ಲರ ಉತ್ತರ: ''ನೋಡೋಣ!'' ಅಂತಲೇ!

**ಮೀನಾ :** ಅಳು ಬುರುಕುತನ ನಿಮ್ಮ ವಿಶೇಷ ಗುಣ. ಹುಟ್ಟಿದಾರಭ್ಯ ಇದು ನಿಮ್ಮನ್ನು ಕಾಡುತ್ತಿದೆ. ಇದರಿಂದ ನಿಮಗೇನೂ ತೊಂದರೆ ಇಲ್ಲಾ ಅಂತ ಅನ್ನಿಸಿದರೂ, ನಿಮ್ಮನ್ನ ಸಾಕಿದವರಿಗೆ ಮತ್ತು ನಿಮ್ಮ ಸಹಜೀವಿಗಳಿಗೆ ತಲೆ ಕೆಡಿಸಿರ್ತೀರಾ. ಮೀನಾದವರಿಗೆ ಸ್ವಲ್ಪ ವಿಟಮಿನ್ 'ಸಿ' ಕೊರತೆ ಇರುತ್ತೆ. ಹಾಗಾಗಿ ನೆಗಡಿ ಬರೋದು ಜಾಸ್ತಿ. ನಿಮ್ಮ ಅಳುಮುಂಜಿ–ನೆಗಡಿ ಮೂಗು ಭಯಂಕರ ಕಾಂಬಿನೇಶನ್ ಆಗಿ ಪ್ರಪಂಚವನ್ನು ಕಾಡುತ್ತೆ.

***ಒಟ್ಟಿನಲ್ಲಿ ಹೇಳೋದೂ ಅಂದ್ರೆ, ಈ ಸೃಷ್ಟಿಯಲ್ಲಿ ಯಾವುದೂ ''ಪರ್‌ಫೆಕ್ಟ್'' ಅನ್ನೋದು ಇಲ್ಲ ಬಿಡಿ. ಈಸಬೇಕು ಇದ್ದು ಜಯಿಸಬೇಕು ಅನ್ನೋ ದಾಸರ ನುಡಿಯನ್ನು ಜ್ಞಾಪಿಸಿಕೊಂಡು ಬಾಳನ್ನು ಸಾಗಿಸಿಕೊಳ್ಳಿ!***